ಸಂಪುಟ 01 | ಸಂಚಿಕೆ 136 | ಶನಿವಾರ 04 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ಗಣಿ ಜಾಗೃತಿ ದಿನ**

ಪ್ರತಿ ವರ್ಷ ಏಪ್ರಿಲ್ 4 ರಂದು ಅಂತರರಾಷ್ಟ್ರೀಯ ಗಣಿ ಜಾಗೃತಿ ಮತ್ತು ಗಣಿ ಕ್ರಿಯೆಯಲ್ಲಿ ಸಹಾಯ ದಿನವನ್ನು ನಾಗರಿಕರ ಸುರಕ್ಷತೆ, ಆರೋಗ್ಯ ಮತ್ತು ಜೀವನಕ್ಕೆ ನೆಲಬಾಂಬ್‌ಗಳಿಂದ ಉಂಟಾಗುವ ಬೆದರಿಕೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ರಾಜ್ಯ ಸರ್ಕಾರಗಳು ಗಣಿ ತೆರವುಗೊಳಿಸುವ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸಲು ಆಚರಿಸಲಾಗುತ್ತದೆ.

**2) ಅಂತರರಾಷ್ಟ್ರೀಯ ಕ್ಯಾರೆಟ್ ದಿನ**

2003 ರಲ್ಲಿ, ಸಲಾಡ್‌ನ ಅತ್ಯಗತ್ಯ ಘಟಕಾಂಶವನ್ನು ಗೌರವಿಸುವ ಏಕೈಕ ಉದ್ದೇಶದಿಂದ ಉತ್ಸಾಹಭರಿತ ಬೇರಿನ ಮೊದಲ ವಾರ್ಷಿಕ ಉತ್ಸವವನ್ನು ನಡೆಸಲಾಯಿತು. ಪ್ರಸ್ತುತ, ಈ ಕಾರ್ಯಕ್ರಮವನ್ನು ಫ್ರಾನ್ಸ್, ಇಟಲಿ, ಸ್ವೀಡನ್, ರಷ್ಯಾ, ಆಸ್ಟ್ರೇಲಿಯಾ, ಜಪಾನ್ ಮತ್ತು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಬಹಳ ಸಂತೋಷ ಮತ್ತು ಆಸಕ್ತಿಯಿಂದ ಆಚರಿಸಲಾಗುತ್ತದೆ.

## ಸುಭಾಷಿತ

ನಿನ್ನ ಕೆಲಸಗಳನ್ನು ನೀನು ಮಾಡುತ್ತಾ ಹೋಗು. ಆಗ ಜಗತ್ತೇ ನಿನ್ನನ್ನು ಅನುಕರಿಸುತ್ತದೆ. ಜಗತ್ತನ್ನು ನೀನು ಅನುಕರಿಸಲು ಹೋಗಬೇಡ. ಅದರಲ್ಲಿ ಸ್ವಂತಿಕೆ ಇರುವುದಿಲ್ಲ.

–ಜಿ.ಪಿ.ರಾಜರತ್ನಂ

# ಕ್ಷೇತ್ರ ಮರು ವಿಂಗಡಣೆ ಸಂಚಲನ

## ರಾಜ್ಯ ರಾಜಕೀಯಕ್ಕೆ ಹೊಸ ದಿಕ್ಕು

**ಬೆಂಗಳೂರು: ದೇಶದ ರಾಜಕೀಯ ಇತಿಹಾಸದಲ್ಲೇ ಮಹತ್ವದ ಬದಲಾವಣೆಗೆ ಕಾರಣವಾಗಬಹುದಾದ ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆ ವೇಗ ಪಡೆದುಕೊಂಡಿದ್ದು, ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಣಾಯಕ ಹೆಜ್ಜೆ ಇಡಲು ಸಜ್ಜಾಗಿದೆ.**


ಮೇ ತಿಂಗಳ ಎರಡನೇ ಅಥ–'ವಾ ಮೂರನೇ ವಾರದಲ್ಲಿ ಸಂಸತ್ತಿನ ಉಭಯ ಸದನಗಳ ವಿಶೇಷ ಅಧಿವೇಶನ ಕರೆದು ಕ್ಷೇತ್ರ ಮರು ವಿಂಗಡಣೆ ಮಸೂದೆ ಅಂಗೀಕರಿಸುವ ಸಾಧ್ಯತೆ ಇದೆ ಎಂದು ರಾಜಕೀಯ ಮೂಲಗಳು ತಿಳಿಸಿವೆ. ಈಗಾಗಲೇ ಮಹಿಳಾ ಮೀಸಲಾತಿಗೆ ಸಂಬಂಧಿಸಿದ ನಾರಿ ಶಕ್ತಿ ವಂದನಾ ಅಧಿನಿಯಮ್ 2023 ಸಂಸತ್ತಿನ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಅಂಗೀಕಾರಗೊಂಡಿದ್ದು, ಕ್ಷೇತ್ರ ಮರು ವಿಂಗಡಣೆ ಬಳಿಕ ಅದರ ಅನುಷ್ಠಾನಕ್ಕೆ ದಾರಿ ಸುಗಮವಾಗಲಿದೆ. ಮೊದಲ ಬಾರಿಗೆ ದೊಡ್ಡ ಪ್ರಮಾಣದ ಮಹಿಳಾ ಪ್ರತಿನಿಧಿತ್ವ ಮಹಿಳೆಯರಿಗೆ ಶೇ.33 ಮೀಸಲಾತಿ ಜಾರಿಗೆ ಬಂದರೆ: ವಿಧಾನಸಭೆಯಲ್ಲಿ ಸುಮಾರು 110 ಮಹಿಳಾ ಶಾಸಕರು ಲೋಕಸಭೆಯಲ್ಲೂ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಗಣನೀಯ ಏರಿಕೆ ಇದು ರಾಜ್ಯ ರಾಜಕೀಯದಲ್ಲಿ ಮಹಿಳಾ ನಾಯಕತ್ವವನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸುವ ಐತಿಹಾಸಿಕ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ.

### ಹಾಲಿ ವಿಧಾನಸಭಾ ಕ್ಷೇತ್ರಗಳು–224

**ಕ್ಷೇತ್ರ ಮರು ವಿಂಗಡಣೆ ನಂತರ –336**
**ಹಾಲಿ ಲೋಕಸಭಾ ಕ್ಷೇತ್ರಗಳು –28**
**ಕ್ಷೇತ್ರ ಮರು ವಿಂಗಡಣೆ ನಂತರ–42**
**ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ –110**
**ಮೊದಲ ಬಾರಿಗೆ ದೊಡ್ಡ ಪ್ರಮಾಣದ ಮಹಿಳಾ ಪ್ರತಿನಿಧಿತ್ವ ಮಹಿಳೆಯರಿಗೆ ಶೇ.33 ಮೀಸಲಾತಿ ಜಾ–ರಿಗೆ ಬಂದರೆ: ವಿಧಾನಸಭೆಯಲ್ಲಿ ಸುಮಾರು –110 ಮಹಿಳಾ ಶಾಸಕರು**

### ಲೋಕಸಭಾ ಕ್ಷೇತ್ರಗಳ ವಿಭಜನೆ

**ಬೆಂಗಳೂರು –6**
**ತುಮಕೂರು –2**
**ಕಲಬುರಗಿ –2**
**ಮೈಸೂರು –2**
**ಬೆಳಗಾವಿ –3**




### ಮುಂದಿನ ಹಂತಗಳು

**ಪಂಚ ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ಮೇ 4ರಂದು ಪ್ರಕಟವಾದ ಬಳಿಕ ಕೇಂದ್ರ ಸರ್ಕಾರ ವಿಶೇಷ ಅಧಿವೇಶನ ಕರೆದಿಡುವ ನಿರೀಕ್ಷೆ ಇದೆ. ಮಸೂದೆ ಅಂಗೀಕಾರವಾದ ನಂತರ ಚುನಾವಣಾ ಆಯೋಗ ರಾಜ್ಯವಾರು ಸಮೀಕ್ಷೆ ನಡೆಸಿ ಹೊಸ ಕ್ಷೇತ್ರಗಳ ಗಡಿಗಳನ್ನು ಅಂತಿಮಗೊಳಿಸಲಿದೆ. ಜನಸಂಖ್ಯೆ ಆಧಾರಿತ ಪ್ರತಿನಿಧಿತ್ವ, ಆಡಳಿತ ಸುಗಮತೆ ಹಾಗೂ ಮಹಿಳಾ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಈ ಮರು ವಿಂಗಡಣೆಯ ಮುಖ್ಯ ಉದ್ದೇಶವಾಗಿದೆ.**

### ಅಸ್ತಿತ್ವಕ್ಕೆ ಬರಲಿರುವ ಹೊಸ ಕ್ಷೇತ್ರಗಳು

ಕ್ಷೇತ್ರ ಪುನರ್ ವಿಂಗಡಣೆಯಾದರೆ ರಾಜಧಾನಿ ಬೆಂಗಳೂರಿನ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 48ಕ್ಕೆ ಏರಿಕೆಯಾಗಲಿದೆ. ಬೆಂಗಳೂರಿನಲ್ಲಿ ಪ್ರಸ್ತುತ 28 ಕ್ಷೇತ್ರಗಳಿದ್ದು, ಹೆಚ್ಚುವರಿಯಾಗಿ 20 ಕ್ಷೇತ್ರಗಳು ಸೇರಲಿವೆ. ಅತಿ ದೊಡ್ಡ ಕ್ಷೇತ್ರ ಗಳಾಗಿರುವ ರಾಜರಾಜೇಶ್ವರಿನಗರ 3, ಯಶ ವಂತಪುರ 3, ಬೆಂಗಳೂರು ದಕ್ಷಿಣ 3, ಬೊಮ್ಮನ ಹಳ್ಳಿ 2, ಮಹದೇವಪುರ 3, ಯಲಹಂಕ 2, ರಾಜಾಜಿನಗರ 2, ಹೆಬ್ಬಾಳ 2, ಶಿವಾಜಿನಗರ 2, ಗಾಂಧಿನಗರ 2, ಕೆ.ಆರ್.ಪುರಂ 3, ಬ್ಯಾಟರಾಯನಪುರ 2 ಸೇರಿ ಒಟ್ಟು 20 ಕ್ಷೇತ್ರಗಳು ಸೃಜನೆಯಾಗಲಿವೆ. ಬೆಂಗಳೂರು ಹೊರತುಪಡಿಸಿದರೆ 2ನೇ ಅತಿದೊಡ್ಡ ಜಿಲ್ಲೆಯಾಗಿರುವ ಬೆಳಗಾವಿಯಲ್ಲಿ ಪ್ರಸ್ತುತ 18 ವಿಧಾನಸಭಾ ಕ್ಷೇತ್ರಗಳಿದ್ದು, ಹೆಚ್ಚುವರಿಯಾಗಿ 7ರಿಂದ 10 ಕ್ಷೇತ್ರಗಳು ಸೃಷ್ಟಿಯಾಗಲಿವೆ. ಬೆಳಗಾವಿ ಉತ್ತರ ಮತ್ತು ದಕ್ಷಿಣದ ಜತೆಗೆ ಹೆಚ್ಚುವರಿಯಾಗಿ ಪೂರ್ವ ಹಾಗೂ ಪಶ್ಚಿಮ, ದೊಡ್ಡ ಕ್ಷೇತ್ರವಾಗಿರುವ ಚಿಕ್ಕೋಡಿ, ರಾಯ ಭಾಗ, ಕಿತ್ತೂರು ಮತ್ತಿತರ ಕ್ಷೇತ್ರಗಳನ್ನು ವಿಭಜನೆ ಮಾಡುವ ಚಿಂತನೆ ಇದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲೂ ವಿಧಾನಸಭಾ ಕ್ಷೇತ್ರಗಳ ಪೈಕಿ ಭಾರಿ ಬದಲಾವಣೆಯಾಗುವ ಸಾಧ್ಯತೆಗಳು ಇವೆ. ನಗರ ವ್ಯಾಪ್ತಿಯ ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಕ್ಷೇತ್ರಗಳಲ್ಲಿ ಹೆಚ್ಚುವರಿಯಾಗಿ 3 ಕ್ಷೇತ್ರಗಳ ಸೃಜನೆ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಮತ್ತೊಂದು ಹೊಸ ಕ್ಷೇತ್ರ ರಚನೆಯಾಗಲಿದೆ. ಮೈಸೂರಿಗೆ ಹೊಂದಿಕೊಂಡಿರುವ ಕೊಡಗಿನಲ್ಲಿ ಸದ್ಯ 2 ವಿಧಾನಸಭಾ ಕ್ಷೇತ್ರಗಳಿವೆ. ಮಡಿಕೇರಿ ಮತ್ತು ವಿರಾಜಪೇಟೆ ಜತೆಗೆ ಹೆಚ್ಚುವ–ರಿಯಾಗಿ ಶನಿವಾರಸಂತೆ, ಪೊನ್ನಂಪೇಟೆ ಕ್ಷೇತ್ರಗಳು ಅಸ್ತಿತಕ್ಕೆ ಬರಲಿವೆ. ತುಮಕೂರಿನಲ್ಲಿ ಪ್ರಸ್ತುತ 10 ವಿಧಾನಸಭಾ ಕ್ಷೇತ್ರಗಳಿದ್ದು, ಮರು ವಿಂಗಡಣೆ ನಂತರ 4ರಿಂದ 5 ಕ್ಷೇತ್ರಗಳು ಹೊಸದಾಗಿ ಅಸ್ತಿತ್ವಕ್ಕೆ ಬರಲಿವೆ. ತುಮಕೂರು ನಗರ, ಗ್ರಾಮಾಂತರದ ಜತೆಗೆ ತುಮಕೂರು ಉತ್ತರ, ಶಿರಾದಲ್ಲಿ ಕಳ್ಳಂಬೆಳ್ಳ, ಚಿಕ್ಕನಾಯಕನ ಹಳ್ಳಿಯಲ್ಲಿ ಹುಳಿಯಾರು, ಬೆಳ್ಳಾವಿ, ಹೆಬ್ಬೂರು ರಚನೆಯಾಗಲಿವೆ. ಶಿವಮೊಗ್ಗದಲ್ಲಿ ಶಿವಮೊಗ್ಗ ನಗರ ಅಸ್ತಿತ್ವ ಕಳೆದುಕೊಳ್ಳಲಿದ್ದು, ಶಿವಮೊಗ್ಗ ಉತ್ತರ, ಶಿವಮೊಗ್ಗ ದಕ್ಷಿಣ, ಶಿವಮೊಗ್ಗ ಗ್ರಾಮಾಂತರ ಬದಲಿಗೆ ಹೊಳೆಹೊನ್ನೂರು, ಶಿಕಾರಿಪುರ ತಾಲೂಕಿನ ಶಿರಾಳಕೊಪ್ಪ, ಆಯನೂರು, ಹೊಸನಗರ ರಚನೆಯಾಗಲಿವೆ. ದಾವಣಗೆರೆಯಲ್ಲೂ ಹೆಚ್ಚುವರಿ ಕ್ಷೇತ್ರಗಳು ರಚನೆಯಾಗಲಿವೆ. ಹೊನ್ನಾಳಿ ಜತೆಗೆ ತಾಲೂಕು ಮಾನ್ಯತ ಸಂತೇಬೆನ್ನೂರು ಸೇರಿದಂತೆ ಅನ್ನೆರಡು ಕ್ಷೇತ್ರಗಳು ಪಡೆದಿರುವ ನ್ಯಾಮತಿ, ಚನ್ನಗಿರಿ ತಾಲೂಕಿನ ಆಸ್ತಿಹಕ್ಕೆ ಬರಲಿವೆ. ಚಿಕ್ಕಮಗಳೂರಿನಲ್ಲೂ ಕ್ಷೇತ್ರಗಳು ಏರಿಕೆಯಾಗಲಿದೆ. ಶೃಂಗೇರಿ ಕ್ಷೇತ್ರದಲ್ಲಿರುವ ನರಸಿಂಹರಾಜಪುರ, ಬರೂರು ಮು ಅಜ್ಜಂಪುರ ಕ್ಷೇತ್ರಗಳು ರಾತನೆಯಾಗಲಿವೆ. ದಕ್ಷಿಣ ಕನ್ನಡ, ಉತ್ತರಕನ್ನಡ, ಧಾರವಾಡ, ಕಲಬುರಗಿ, ಬಳ್ಳಾರಿ, ರಾಯಚೂರು, ಕೊಪ್ಪಳ, ವಿಜಯಪುರ, ಬೀದರ್, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ ಸೇರಿದಂತೆ ಮತ್ತಿತರ ಜಿಲ್ಲೆಗಳಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಳವಾಗಲಿದೆ.

### ಕರ್ನಾಟಕದಲ್ಲಿ ಸ್ಥಾನಗಳ ಭಾರೀ ಹೆಚ್ಚಳ

**ಮರು ವಿಂಗಡಣೆ ಜಾರಿಯಾದಲ್ಲಿ ರಾಜ್ಯದ ರಾಜ–ಕೀಯ ನಕ್ಷೆಯೇ ಬದಲಾಗಲಿದೆ.**
**ವಿಧಾನಸಭಾ ಕ್ಷೇತ್ರಗಳು :224–336**
**ಲೋಕಸಭಾ ಕ್ಷೇತ್ರಗಳು :28–42**
**ಅಂದರೆ ರಾಜ್ಯದಲ್ಲಿ 112 ವಿಧಾನಸಭಾ ಕ್ಷೇತ್ರಗಳು ಹಾಗೂ 14 ಲೋಕಸಭಾ ಕ್ಷೇತ್ರಗಳು ಹೆಚ್ಚಾಗಲಿವೆ. ಪ್ರತಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರಾಸರಿ 8 ವಿಧಾನಸಭಾ ಕ್ಷೇತ್ರಗಳು ಒಳಗೊಂಡಂತೆ ಹೊಸ ರಚನೆ ರೂಪಿಸಲಾಗಲಿದೆ.**

### ರಾಜಕೀಯ ನಾಯಕರಿಗೆ ಸವಾಲು ಕ್ಷೇತ್ರ ಮರು ವಿಂಗಡಣೆ ಜಾರಿಯಾದರೆ:

ಹಾಲಿ ಕ್ಷೇತ್ರಗಳ ಗಡಿ ಬದಲಾವಣೆ
ಕೆಲವು ಕ್ಷೇತ್ರಗಳ ಅಸ್ತಿತ್ವವೇ ರದ್ದು
ಹೊಸ ಕ್ಷೇತ್ರಗಳ ಸೃಷ್ಟಿ
ಮೀಸಲು ಕ್ಷೇತ್ರಗಳ ಪುನರ್ ವಿನ್ಯಾಸ
ಇವುಗಳಿಂದ ಹಲವು ಹಿರಿಯ ರಾಜಕಾರಣಿಗಳ ರಾಜಕೀಯ ಲೆಕ್ಕಾಚಾರ ಸಂಪೂರ್ಣವಾಗಿ ಬದಲಾಗುವ ಸಾಧ್ಯತೆ ಇದೆ.
ಹೊಸ ನಾಯಕರು ಹಾಗೂ ಯುವ ರಾಜ–ಕಾರಣಿಗಳಿಗೆ ಅವಕಾಶಗಳೂ ಹೆಚ್ಚಾಗಲಿವೆ.


### 42 ಲೋಕಸಭಾ ಸ್ಥಾನಗಳು

**ರಾಜಧಾನಿ ಬೆಂಗಳೂರಿನಲ್ಲಿ ಹಾಲಿ ಇರುವ 3 ಲೋಕಸಭಾ ಕ್ಷೇತ್ರಗಳ ಜತೆಗೆ ಹೆಚ್ಚುವ–ರಿಯಾಗಿ 3 ಕ್ಷೇತ್ರಗಳು ರಚನೆಯಾಗಲಿವೆ. ಇದೇ ಮೊದಲ ಬಾರಿಗೆ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಬೇರ್ಪಟ್ಟು ರಾಮನಗರ, ಮೈಸೂ–ರಿನಿಂದ ಬೇರ್ಪಟ್ಟು ಮಡಿಕೇರಿ, ಚಿಕ್ಕಮಗಳೂರು, ವಿಜಯನಗರ, ಶಿರಾ ಇಲ್ಲವೇ ತಿಪಟೂರು, ಶಿರಸಿ ಸೇರಿದಂತೆ ಒಟ್ಟು ಹೆಚ್ಚುವರಿಯಾಗಿ 12 ಲೋಕಸಭಾ ಕ್ಷೇತ್ರಗಳು ಅಸ್ತಿತ್ವಕ್ಕೆ ಬರಲಿವೆ.**

## ಛತ್ರಪತಿ ಶಿವಾಜಿ ಮಹಾರಾಜರ ಪುಣ್ಯತಿಥಿ ಶಿವಾಜಿ ಸೇವಾ ಟ್ರಸ್ಟ್ ಸಮಿತಿಯಿಂದ ನುಡಿನಮನ ಸಲ್ಲಿಕೆ

**ನೈಜ್ಯ ದೇಸೆ ನ್ಯೂಸ್**

ಏಪ್ರಿಲ್ 3 ಭಾರತ ದೇಶಕ್ಕೆ ಒಂದು ದುಃಖದ ದಿನ ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿದ ಮಹಾಶಕ್ತಿ ಶಿವಾಜಿ ಮಹಾರಾಜರು ನಮ್ಮನ್ನು ಅಗಲಿದ ದಿನವಿದು. ಅವರ ವಿಚಾರಗಳನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿಯುವ ಕೆಲಸ ಮಾಡಬೇಕೆಂದು ಮಾಜಿ ಸಂಸದ ಕೆ.ವಿರುಪಾಕ್ಷಪ್ಪ ಕರೆ ನೀಡಿದರು.




ಮರಾಠ ಸಾಮ್ರಾಜ್ಯದ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಪುಣ್ಯತಿಥಿಯನ್ನು ಛತ್ರಪತಿ ಶಿವಾಜಿ ಸೇವಾ ಟ್ರಸ್ಟ್ ವತಿಯಿಂದ ನಗರದ ಗಂಗಾವತಿ ರಸ್ತೆಯಲ್ಲಿರುವ ಶಿವಾಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನುಡಿನಮನ ಸಲ್ಲಿಸಿ ಮಾತನಾಡಿದರು. ಈವೇಳೆಃ ಛತ್ರಪತಿ ಶಿವಾಜಿ ಸೇವಾ ಟ್ರಸ್ಟ್ ಅಧ್ಯಕ್ಷ ವಿಶ್ವನಾಥ ಚೌದ್ರಿ, ವಿಶ್ವ ಹಿಂದೂ ಪರಿಷತ್ ತಾಲೂಕಾಧ್ಯಕ್ಷ ದೇವರಾಜ ಪಾಟೀಲ್, ಕಾರ್ಯದರ್ಶಿ ಕೆ.ಜಗದೀಶ, ಟಿ.ರಾಮಾಂಜನೇಯ, ನಾಗೇಶ ಪವಾರ್, ಕಾನೂನು ಸಲಹೆಗಾರ ಗಿರೀಶ, ಮನೋಹರ ಹಿರೇಮಠ, ಶುಭಾಷ ಪವಾರ್, ಶಿವು ಸೇರಿದಂತೆ ಹಲವಾರು ಹಿಂದೂ ಮುಖಂಡರು ಭಾಗವಹಿಸಿದ್ದರು.

## ನೀರು ಶುದ್ಧೀಕರಣ ಘಟಕಗಳ ಮೇಲೆ ಪುರಸಭೆ ಮುಖ್ಯಾಧಿಕಾರಿಗಳ ದಿಡೀರ್ ಭೇಟಿ, ಪರಿಶೀಲನೆ



**ನೈಜ್ಯ ದೇಸೆ ನ್ಯೂಸ್**

**ಲಿಂಗಸಗೂರು: ಪಟ್ಟಣದಲ್ಲಿ ಕುಡಿಯುವ ನೀರಿನ ಗುಣಮಟ್ಟ ಕಾಪಾಡುವ ಹಾಗೂ ಅಕ್ರಮ ನೀರು ಶುದ್ಧೀಕರಣ ಘಟಕಗಳನ್ನು ನಿಯಂತ್ರಿಸುವ ಉದ್ದೇಶದಿಂದ ಪುರಸಭೆ ಮುಖ್ಯಾಧಿಕಾರಿ ನಟರಾಜ ಅವರು ಅಧಿಕಾರಿಗಳ ತಂಡದೊಂದಿಗೆ ದಿಡೀರ್ ಭೇಟಿ ನೀಡಿ ವಿವಿಧ ನೀರು ಶುದ್ಧೀಕರಣ ಹಾಗೂ ಮಿನರಲ್ ವಾಟರ್ ತಯಾರಿಕಾ ಘಟಕಗಳನ್ನು ಪರಿಶೀಲಿಸಿದರು.**

ಪಟ್ಟಣದ ಕೈಗಾರಿಕಾ ಪ್ರದೇಶದ ಸಮೀಪ ಕಾರ್ಯನಿರ್ವಹಿಸುತ್ತಿರುವ ಘಟಕಗಳಿಗೆ ಭೇಟಿ ನೀಡಿದ ಅಧಿಕಾರಿಗಳು, ಪುರಸಭೆಯಿಂದ ನೀಡಲಾದ ವ್ಯಾಪಾರ ಪರವಾನಿಗೆ, ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿ, ಆರೋಗ್ಯ ಇಲಾಖೆಯ ಪ್ರಮಾಣಪತ್ರ, ನೀರಿನ ಗುಣಮಟ್ಟ ಪರೀಕ್ಷಾ ವರದಿ ಸೇರಿದಂತೆ ಅಗತ್ಯ ದಾಖಲೆಗಳನ್ನು ಪರಿಶೀಲಿಸಿದರು. ಪರಿಶೀಲನೆ ವೇಳೆ ಕೆಲವು ಘಟಕಗಳಲ್ಲಿ ದಾಖಲೆಗಳು ತಕ್ಷಣ ಲಭ್ಯವಾಗದಿರುವುದು ಗಮನಕ್ಕೆ ಬಂದಿದ್ದು, ಘಟಕದ ಮಾಲೀಕರು ಸ್ಥಳದಲ್ಲಿರದ ಕಾರಣ ಸಿಬ್ಬಂದಿ ಬಳಿಕ ದಾಖಲೆಗಳನ್ನು ಸಲ್ಲಿಸುವುದಾಗಿ ತಿಳಿಸಿದ್ದಾರೆ. ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಮುಖ್ಯಾಧಿಕಾರಿ ನಟರಾಜ ಅವರು, ನಿಯಮಾನುಸಾರ ದಾಖಲೆಗಳನ್ನು ಸಲ್ಲಿಸದ ಘಟಕಗಳಿಗೆ ನೋಟಿಸ್ ಜಾರಿ ಮಾಡಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಪಟ್ಟಣದಲ್ಲಿ ಪರವಾನಿಗೆ ಪಡೆಯದೆ ಕಾರ್ಯನಿರ್ವಹಿಸುವ ನೀರು ಶುದ್ಧೀಕರಣ ಘಟಕಗಳ ವಿರುದ್ಧ ವಿಶೇಷ ಅಭಿಯಾನ ಕೈಗೊಳ್ಳಲಾಗುತ್ತದೆ. ಸಾರ್ವಜನಿಕರಿಗೆ ಪೂರೈಸುವ ಕುಡಿಯುವ ನೀರಿನ ಗುಣಮಟ್ಟದಲ್ಲಿ ಯಾವುದೇ ರಾಜಿ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಸರ್ಕಾರದ ನಿಯಮಾವಳಿ, ಆರೋಗ್ಯ ಹಾಗೂ ಸುರಕ್ಷತಾ ಮಾನದಂಡಗಳನ್ನು ಪಾಲಿಸದೆ ಕಾರ್ಯನಿರ್ವಹಿಸುವ ಘಟಕಗಳು ಪತ್ತೆಯಾದಲ್ಲಿ ಅವುಗಳನ್ನು ಮುಚ್ಚುವ ಕ್ರಮ ಸೇ–ರಿದಂತೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಇತ್ತೀಚೆಗೆ ಮಾರ್ಚ್ 31 ರಂದು ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆಯ ಅಧ್ಯಕ್ಷ ತಿಮ್ಮಾ ರೆಡ್ಡಿ ಮುನ್ನೂರ ಅವರ ನೇತೃತ್ವದಲ್ಲಿ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿ ಅಕ್ರಮ ನೀರು ಶುದ್ಧೀಕರಣ ಘಟಕಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗಿತ್ತು. ಸಾರ್ವಜನಿಕರ ಮನವಿಗೆ ಸ್ಪಂದಿಸಿದ ಪುರಸಭೆ ಆಡಳಿತ ಗುರುವಾರ ದಿಢೀರ್ ತಪಾಸಣೆ ನಡೆಸಿದ್ದು, ಮುಂದಿನ ದಿನಗಳಲ್ಲಿಯೂ ಪರಿಶೀಲನೆ ಮುಂದುವ–ರಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪುರಸಭೆಯ ಆರೋಗ್ಯ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಜನಗಣತಿಯಿಂದ ಜನಕಲ್ಯಾಣ :ಸಿಂಧನೂರು ತಹಶೀಲ್ದಾರ್ ಅರುಣ್ ದೇಸಾಯಿ

**ಸಿಂಧನೂರು: ದೇಶದ ಅಭಿವೃದ್ಧಿಗೆ ಮೂಲ ಆಧಾರವಾಗಿರುವ ಜನಗಣತಿ ಕಾರ್ಯವನ್ನು ಜವಾಬ್ದಾರಿಯಿಂದ ಮತ್ತು ನಿಖರವಾಗಿ ನಡೆಸಬೇಕು ಎಂದು ಸಿಂಧನೂರು ತಹಶೀಲ್ದಾರ್ ಅರುಣ್ ದೇಸಾಯಿ ಅವರು ಹೇಳಿದರು. ತಾಲ್ಲೂಕಿನಲ್ಲಿ ನಡೆಯಲಿರುವ ಜನಗಣತಿ 2027 ಕಾರ್ಯದ ಹಿನ್ನೆಲೆಯಲ್ಲಿ ಗಣತಿ ಸಿಬ್ಬಂದಿ (Enumerators) ಹಾಗೂ ಮೇಲ್ವಿಚಾರಕರು (Supervisors) ಗಳಿಗೆ ಆಯೋಜಿಸಲಾದ ತರಬೇತಿ ಕಾರ್ಯಕ್ರಮವನ್ನು ಸಿಂಧನೂರು ಸರ್ಕಾರಿ ಪದವಿ ಕಾಲೇಜಿನಲ್ಲಿ ಅವರು ಉದ್ಘಾಟಿಸಿ ಮಾತನಾಡಿದರು.**




ಜನಗಣತಿ ದೇಶದ ಜನಸಂಖ್ಯೆ, ಆರ್ಥಿಕ ಪರಿಸ್ಥಿತಿ, ಶಿಕ್ಷಣ, ಉದ್ಯೋಗ, ವಾಸಸ್ಥಿತಿ ಸೇರಿದಂತೆ ವಿವಿಧ ಸಾಮಾಜಿಕ ಮಾಹಿತಿಗಳನ್ನು ಸಂಗ್ರಹಿಸುವ ಅತ್ಯಂತ ಮಹತ್ವದ ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಸರ್ಕಾರದ ಜನಕಲ್ಯಾಣ ಯೋಜನೆಗಳ ರೂಪುರೇಷೆ ತಯಾರಿಕೆಯಲ್ಲಿ ಜನಗಣತಿ ಮಾಹಿತಿಯು ಪ್ರಮುಖ ಪಾತ್ರವಹಿಸುತ್ತದೆ ಎಂದು ಅವರು ತಿಳಿಸಿದರು. ತರಬೇತಿ ಕಾರ್ಯಕ್ರಮದಲ್ಲಿ ಗಣತಿ ಸಿಬ್ಬಂದಿಗೆ ಮನೆಮನೆಗೆ ಭೇಟಿ ನೀಡುವ ವಿಧಾನ, ಮಾಹಿತಿ ಸಂಗ್ರಹಣೆಯ ನಿಯಮಗಳು, ಡಿಜಿಟಲ್ ಸಾಧನಗಳ ಬಳಕೆ, ಮಾಹಿತಿಯ ಗೌಪ್ಯತೆ ಕಾಪಾಡುವ ವಿಧಾನ ಹಾಗೂ ಸಾರ್ವಜನಿಕರೊಂದಿಗೆ ಸಮನ್ವಯ ಸಾಧಿಸುವ ಬಗ್ಗೆ ಸಮಗ್ರ ಮಾರ್ಗದರ್ಶನ ನೀಡಲಾಯಿತು. ಸಿಂಧನೂರು ತಾಲ್ಲೂಕಿನಲ್ಲಿ ಜನಗಣತಿ ಕಾರ್ಯಕ್ಕಾಗಿ ಒಟ್ಟು ಸುಮಾರು 745 ಗಣತಿದಾರರು ನೇಮಕಗೊಂಡಿದ್ದು, ತರಬೇತಿ ಪಡೆದ ಸಿಬ್ಬಂದಿ ಏಪ್ರಿಲ್ 16, 2026ರಿಂದ ಕ್ಷೇತ್ರಮಟ್ಟದ ಕಾರ್ಯವನ್ನು ಪ್ರಾರಂಭಿಸಲಿದ್ದಾರೆ.

ಜನಗಣತಿಯ ಮೊದಲ ಹಂತವಾಗಿ ಸ್ವಯಂ ಗಣನೆ (Self Enumeration) ಪ್ರಕ್ರಿಯೆ ಏಪ್ರಿಲ್ 1ರಿಂದ ಏಪ್ರಿಲ್ 15, 2026ರವರೆಗೆ ನಡೆಯಲಿದೆ. ಈ ಅವಧಿಯಲ್ಲಿ ಸಾರ್ವಜನಿಕರು ತಾವೇ ತಮ್ಮ ಕುಟುಂಬದ ವಿವರಗಳನ್ನು ಆನ್‌ಲೈನ್ ಮೂಲಕ https://se.census.gov.in ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ. ಇದಾದ ಬಳಿಕ ಏಪ್ರಿಲ್ 16ರಿಂದ ಮೇ 15, 2026ರವರೆಗೆ ಗಣತಿ ಸಿಬ್ಬಂದಿ ಮನೆಮನೆಗೆ ಭೇಟಿ ನೀಡಿ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಜನಗಣತಿ ಕಾರ್ಯ ಯಶಸ್ವಿಯಾಗಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದ್ದು, ಗಣತಿ ಸಿಬ್ಬಂದಿಗೆ ಸರಿಯಾದ ಮತ್ತು ಸಂಪೂರ್ಣ ಮಾಹಿತಿಯನ್ನು ನೀಡುವ ಮೂಲಕ ನಾಗ–ರಿಕರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ತಹಶೀಲ್ದಾರ್ ಅರುಣ್ ದೇಸಾಯಿ ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ತಾಲೂಕು ಆಡಳಿತದ ಅಧಿಕಾರಿಗಳು, ತರಬೇತಿ ನಿರ್ವಾಹಕರು ಹಾಗೂ ಗಣತಿ ಸಿಬ್ಬಂದಿ ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ನಿಶ್ಶಬ್ದ ರಾತ್ರಿ ಮಾತಾಡುವ ಧ್ವನಿ ನೀನು,
ನಂಬಿಕೆಯ ಬೆಳಕಾಗಿ ಹೊಳೆಯುವ ಜ್ಯೋತಿ ನೀನು.
ಕಾಣದರೂ ಮನದೊಳಗಿರುವ ಸಾನ್ನಿಧ್ಯ,
ಜೀವನದ ದಾರಿಯಲ್ಲಿ ನೀಡುವ ಮಾರ್ಗದರ್ಶನ ನೀನು.

ಕಣ್ಣೀರಲ್ಲಿ ಧೈರ್ಯ ತುಂಬುವ ಕೈ ನೀನು,
ಕತ್ತಲಿನಲ್ಲಿ ಬೆಳಕಾಗುವ ದೀಪ ನೀನು.
ಬಿದ್ದು ಎದ್ದಾಗ ಬೆನ್ನಿಗೆ ನಿಂತ ಶಕ್ತಿ,
ಮಾನವನ ಹೃದಯದ ನಿಜವಾದ ಭಕ್ತಿ ನೀನು.

ಮಂದಿರದಲ್ಲೇ ಅಲ್ಲ, ಮನದಲ್ಲಿರುವ ದೇವರು,
ಪ್ರೀತಿಯಲ್ಲೇ ಕಾಣುವ ಪರಮಾತ್ಮ ಸ್ವರೂಪು.
ಒಳ್ಳೆಯ ಕಾರ್ಯದಲ್ಲಿ ನಿನ್ನ ರೂಪ ಕಾಣೆನು,
ಮಾನವೀಯತೆಯಲ್ಲೇ ನಿನ್ನ ನಾಮ ಹಾಡೆನು.

ಹೂವಿನ ಸುವಾಸನೆ, ಗಾಳಿಯ ಸ್ಪರ್ಶದಲ್ಲಿ,
ಪ್ರತಿ ಜೀವದ ನಗುವಿನ ಒಳಗಿರುವೆ ನೀನು.
ಭಕ್ತಿಯ ದಾರಿಯಲ್ಲಿ ನಡೆದು ಹೋದರೆ,
ಜೀವನವೇ ಆಶೀರ್ವಾದವಾಗಿಸುವ ದೇವರು ನೀನು.

ರಮೇಶ್

# ಶ್ರೀ ರೇಣುಕಾ ಎಲ್ಲಮ್ಮ ಮಹಾನ್ ಶಕ್ತಿ ದೇವತೆ: ನಾವದಗಿ ಶ್ರೀ

**ನೈಜ್ಯ ದೆಸೆ ನ್ಯೂಸ್**





**ತಾಳಿಕೋಟಿ: ಮನದಲ್ಲಿ ಭಕ್ತಿ ಶ್ರದ್ಧೆಯಿಂದ ಪೂಜಿಸುವ ಭಕ್ತರ ಇಷ್ಟಾರ್ಥಗಳನ್ನು ಈಡೇ–ರಿಸುವ ಶ್ರೀ ರೇಣುಕಾ ಎಲ್ಲಮ್ಮ ತಾಯಿ ಮಹಾನ್ ಶಕ್ತಿ ದೇವತೆ ಯಾಗಿದ್ದಾಳೆ ಎಂದು ನಾವದಗಿ ಬ್ರಹನ್ಮಠದ ಷ.ಬ್ರ. ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ತಾಲೂಕಿನ ಸುಕ್ಷೇತ್ರ ಅಸ್ಕಿ ಗ್ರಾಮದಲ್ಲಿ ಶ್ರೀ ರೇಣುಕಾ ಎಲ್ಲಮ್ಮ ತಾಯಿಯ ನೂತನ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಹಮ್ಮಿಕೊಂಡ ಧರ್ಮಸಭೆಯ ಸಾನಿಧ್ಯ ವಹಿಸಿ ಅವರು ಬುಧವಾರ ಆಶೀರ್ವಚನ ನೀಡಿದರು.**


ಕಳೆದ 20 ವರ್ಷಗಳಿಂದ ತಾವುಗಳು ತಾಯಿಯ ಜಾತ್ರೆಯನ್ನು ಮಾಡುತ್ತಾ ಬಂದಿರುವುದು ನೀವು ಎಲ್ಲಮ್ಮ ತಾಯಿಯ ಕುರಿತು ಹೊಂದಿರುವ ಭಕ್ತಿಯನ್ನು ಸೂಚಿಸುತ್ತದೆ. ಅವಳ ನೂತನ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ಶ್ಲಾಘನೀಯವಾದ ಕಾರ್ಯವಾಗಿದೆ. ಭೂಮಿ ಮೇಲೆ ಬದುಕಿರುವಷ್ಟು ದಿನ ಒಳ್ಳೆಯ ಪುಣ್ಯದ ಕಾರ್ಯಗಳನ್ನು ಮಾಡಿ, ಏನೆಲ್ಲ ಸಂಪಾದಿಸಿದ್ದೇವೆಯೋ ಇಲ್ಲಿಯೇ ಬಿಟ್ಟು ಹೋಗಬೇಕಾಗಿದೆ. ಎಲ್ಲಮ್ಮ ತಾಯಿ ನಿಮ್ಮೆಲ್ಲ ಇಷ್ಟಾರ್ಥಗಳನ್ನು ಈಡೇರಿಸಲಿ ಎಂದರು. ಪೂಜ್ಯ ಪ್ರಭಯ್ಯ ಸ್ವಾಮಿಗಳು ಮಾತನಾಡಿ ಎಲ್ಲಮ್ಮ ತಾಯಿಯ ನೂತನ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ಪುಣ್ಯದ ಕಾರ್ಯವಾಗಿದೆ.

ಸದಾ ಗುರುವಿನ ಮಾರ್ಗದರ್ಶನದಲ್ಲಿ ನಡೆಯುವಂತವರಾಗಿ, ನಾವದಗಿ ಶಿವಾಚಾರ್ಯರು ಈ ಭಾಗದಲ್ಲಿ ಧರ್ಮ ಜಾಗೃತಿಯ ಕಾರ್ಯ ಮಾಡುತ್ತಿದ್ದಾರೆ ಅವರಿಗೆ ನೀವೆಲ್ಲರೂ ಸಹಕಾರ ನೀಡಬೇಕು ಎಂದರು. ವಣಕಿಹಾಳ– ಬೆಕಿನಾಳದ ಪೂಜ್ಯ ಮಹೇಶ ಮುತ್ಯಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಾಯವಾಡಗಿ ಪಂಚಹಳ್ಳಿ ಹಿರೇಮಠದ ಪೂಜ್ಯ ಪ್ರಭುಲಿಂಗಯ್ಯ ಸ್ವಾಮಿ ಹಿರೇಮಠ ನೇತೃತ್ವ ವಹಿಸಿದ್ದರು ಹಾಗೂ ಪೂಜ್ಯ ಶರಣಯ್ಯ ಸ್ವಾಮಿ ಹಿರೇಮಠ ಸಮ್ಮುಖ ವಹಿಸಿದ್ದರು. ವೇ.ಮೂ. ಶಿವಯ್ಯ ಸ್ವಾಮಿ ಹಾಗೂ ರಾಜು ಬಡಿಗೇರ ಪೂಜಾ ವಿಧಿ ವಿಧಾನಗಳನ್ನು ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಅಸ್ಕಿ ಗ್ರಾಮದ ಗಣ್ಯರು ಹಿರಿಯರು ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಇದ್ದರು.

## ನೇತಾಜಿ ಟ್ಯಾಲೆಂಟ್ ಹಂಟ್ ಪರೀಕ್ಷೆ ಯಶಸ್ವಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರ್ಗದರ್ಶನ ನೀಡುವ ಸಂಸ್ಥೆ: ಗಿರಿಧರ ಪೂಜಾರ್

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಮಾನ್ವಿ ತಾಲೂಕಿನ ಪಾಲಕರ ಮನದಲ್ಲಿ ವಿಶಿಷ್ಠ ಸ್ಥಾನ ಪಡೆದ ನೇತಾಜಿ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶಿಕ್ಷಣ ನೀಡುವುದರ ಜೊತೆಗೆ ಅವರ ಭವಿಷ್ಯಕ್ಕೆ ಉತ್ತಮ ಮಾರ್ಗದರ್ಶನ ನೀಡಿ ಸಾರ್ಥಕ ಕೆಲಸ ಮಾಡುತ್ತಿದೆ ಎಂದು ರಾಜ್ಯ ಸಂಪನ್ಮೂಲ ವ್ಯಕ್ತಿ ಗಿರಿಧರ ಪೂಜಾರ್ ಹೇಳಿದರು. ಅವರು ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯ ನೇತಾಜಿ ಸೈನ್ಸ್ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ 10ನೇ ತರಗತಿ ವಿದ್ಯಾರ್ಥಿಗಳ ಟ್ಯಾಲೆಂಟ್ ಹಂಟ್ ಪರೀಕ್ಷೆಯ ಉದ್ಘಾಟನೆ ಮಾಡಿ ಮಾತನಾಡಿದರು.**




ಇಂದಿನ ಶಿಕ್ಷಣ ವ್ಯಾಪಾರಮಯವಾಗಿದ್ದು, ದುಬಾರಿ ಶುಲ್ಕದ ನಡುವೆಯೂ ಪಾಲಕರು ಸಾಲಸೋಲು ಮಾಡಿ ಮಕ್ಕಳನ್ನು ಓದಿಸುವ ಪರಿಸ್ಥಿತಿ ಉಂಟಾಗಿದೆ. ಆದರೆ ನೇತಾಜಿ ಸೈನ್ಸ್ ಕಾಲೇಜಿನಲ್ಲಿ ಗಟ್ಟಿ ಶಿಕ್ಷಣದ ಜೊತೆಗೆ ಕಡಿಮೆ ಶುಲ್ಕದಲ್ಲಿ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗುತ್ತಿದೆ. ಟ್ಯಾಲೆಂಟ್ ಹಂಟ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಹತ್ತು ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡುವ ಉದ್ದೇಶ ಶ್ಲಾಘನೀಯವಾಗಿದೆ ಎಂದು ಅವರು ತಿಳಿಸಿದರು. ಇದೇ ವೇಳೆ ಆಡಳಿತಾಧಿಕಾರಿ ಡಾ. ಕೆ. ವಿನಯಾ ಮಾತನಾಡಿ, ಕಾಲೇಜಿನಲ್ಲಿ ಅತ್ಯಾಧುನಿಕ ಲ್ಯಾಬ್, ನುರಿತ ಉಪನ್ಯಾಸಕ ವೃಂದ ಹಾಗೂ ಉತ್ತಮ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ವಿಜ್ಞಾನ ವಿಭಾಗವನ್ನು ವಾಣಿಜ್ಯ ಮತ್ತು ಕಲಾ ವಿಭಾಗಗಳಂತೆ ಅತ್ಯುತ್ತಮವಾಗಿ ನಡೆಸಲಾಗುತ್ತದೆ ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಕೆ.ಈ. ನರಸಿಂಹ ವಹಿಸಿದ್ದರು. ಕೆ. ವಿಜಯಲಕ್ಷ್ಮಿ, ಕೆ. ರಾಜರವಿ ವರ್ಮಾ, ಪಕ್ಷಿಪ್ರೇಮಿ ಸಲ್ಲಾವುದ್ದೀನ್, ಆರೀಫ್, ಅನೀಸ್ ಫಾತಿಮಾ, ಬಸವರಾಜ್, ರಹಿಂಪಾಷಾ ಸೇ–ರಿದಂತೆ ಶಿಕ್ಷಕರು, ಉಪನ್ಯಾಸಕರು ಉಪಸ್ಥಿತರಿದ್ದರು. ಈ ಪ್ರತಿಭಾ ಪರೀಕ್ಷೆಯಲ್ಲಿ ಮಾನ್ವಿ ತಾಲೂಕು ಹಾಗೂ ಸುತ್ತಮುತ್ತಲಿನ ಪ್ರೌಢಶಾಲೆಗಳ 1387 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸುಪ್ರಿತಾ (ತಂದೆ ಬಸವರಾಜ್), ಐಶ್ವರ್ಯ ಪಾಟೀಲ್ (ತಂದೆ ಸುದೀಪ್ ಪಾಟೀಲ್), ಸುಖದೇವ್ (ತಂದೆ ಪರಶುರಾಮ್), ರುಕ್ಮಿಣಿ (ತಂದೆ ರಘೋತ್ತಮರಾವ್), ಉಝ್ಮೀರ್ (ತಂದೆ ಪೀರಭಾಷಾ), ಟಿ. ಸಿದ್ಧಾರ್ಥ (ತಂದೆ ಟಿ. ರವಿ), ಶ್ರೀನಿವಾಸ್ (ತಂದೆ ಮಹಾದೇವ), ಶಿವಮಣಿ (ತಂದೆ ಶ್ರೀಧರ್), ಮನೋಜ್ (ತಂದೆ ಹರೀಬಾಬು), ಸಿದ್ದೇಶ (ತಂದೆ ಚೈತನ್ಯ), ಚೇತನ್ (ತಂದೆ ಗೋವಿಂದರಾಜ್) ಅವರು ಪ್ರಥ–ಮ ಸ್ಥಾನಗಳನ್ನು ಪಡೆದು ನಗದು ಬಹುಮಾನ ಮತ್ತು ಸನ್ಮಾನ ಪಡೆದರು. ಈ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡಲಾಗುತ್ತದೆ ಎಂದು ಘೋಷಿಸಲಾಯಿತು.

# ಮಸ್ಕಿಯಲ್ಲಿ ಅನಿಲ ಸಂಕಷ್ಟ: ಯುದ್ಧದ ಹೊಗೆ ಜನರ ಅಡಿಗೆಗೂ ತಲುಪಿತು




**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ವಿಶ್ವದ ದೂರದ ಯುದ್ಧದ ಘರ್ಷಣೆ, ಮಸ್ಕಿಯ ಮನೆಮನೆಗಳ ಅಡುಗೆಮನೆಗೆ ಬಂದು ನಿಂತಂತಾಗಿದೆ. ಇರಾನ್?ಇಸ್ರೇಲ್?ಅಮೇರಿಕಾ ನಡುವಿನ ಉದ್ವಿಗ್ನ ಪರಿಸ್ಥಿತಿ ಪರಿಣಾಮವಾಗಿ ಭಾರತದಲ್ಲಿ ಎಲ್‌ಪಿಜಿ (ದ್ರವೀಕೃತ ಪೆಟ್ರೋಲಿಯಂ ಅನಿಲ) ಪೂರೈಕೆ ತೀವ್ರವಾಗಿ ಕುಂಠಿತಗೊಂಡಿದ್ದು, ಮಸ್ಕಿ ಪಟ್ಟಣದಲ್ಲಿ ಅನಿಲ ಸಿಲಿಂಡರ್ ಕೊರತೆ ಉಂಟಾಗಿ ಜನಜೀವನ ಅಸ್ತವ್ಯಸ್ತವಾಗಿದೆ.**

ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಅಡಚಣೆ ಉಂಟಾಗಿರುವ ಹಿನ್ನೆಲೆ, ಅನಿಲ ಆಮದು ಕಡಿಮೆಯಾಗಿ ದಾಸ್ತಾನುಗಳು ಕ್ಷೀಣಿಸುತ್ತಿವೆ. ಇದರ ಪರಿಣಾಮವಾಗಿ, ಮಸ್ಕಿಯ ಸರ್ಕಾರಿ ತೈಲ ಕಂಪನಿಗಳಾದ ಇಂಡಿಯನ್ ಗ್ಯಾಸ್ ದಿನಕ್ಕೆ ಕೇವಲ 45 ಸಿಲಿಂಡರ್‌ಗಳನ್ನು ಮಾತ್ರ ವಿತರಿಸುತ್ತಿದ್ದರೆ, ಊಕ ಗ್ಯಾಸ್ ಸುಮಾರು 325 ಸಿಲಿಂಡರ್‌ಗಳನ್ನು ನೀಡುತ್ತಿದ್ದುದು ಬೇಡಿಕೆಗೆ ಸರಿಹೊಂದುತ್ತಿಲ್ಲ. ಬೆಳಗಿನ ಮುಂಜಾನೆ 5 ಗಂಟೆಯಿಂದಲೇ ಗ್ರಾಹಕರು ಸರದಿ ಸಾಲಿನಲ್ಲಿ ನಿಂತು ಸಿಲಿಂಡರ್ ಪಡೆಯಲು ಹೋರಾಟ ನಡೆಸುತ್ತಿರುವ ದೃಶ್ಯಗಳು ದಿನನಿತ್ಯದ ಕಥೆಯಾಗಿವೆ. ಅಡಿಗೆಮನೆಯ ಉರಿ ಇಂದಿಗೆ ಕಾದಾಟದ ಉರಿಯಾಗಿ ಬದಲಾಗಿರುವಂತಾಗಿದೆ. ಹೋಟೆಲ್ ಮಾಲೀಕರ ಅಳಲು: "ನಮ್ಮ ಬದುಕೇ ಹೋಟೆಲ್ ಮೇಲೆ ಅವಲಂಬಿತವಾಗಿದೆ. ಗ್ಯಾಸ್ ಕೊರತೆಯಿಂದ ಅಡುಗೆ ಮಾಡುವುದು ದುಸ್ತರವಾಗಿದೆ. ಕಟ್ಟಿಗೆಗಳಿಂದ ಅಡುಗೆ ಮಾಡಿದರೆ ಸಮಯ ಹೆಚ್ಚು ತೆಗೆದುಕೊಳ್ಳುತ್ತದೆ. ಗ್ರಾಹಕರ ಸೇವೆ ನೀಡಲು ಆಗುತ್ತಿಲ್ಲ. ವ್ಯಾಪಾರ ದಿನೇ ದಿನೇ ಕುಸಿಯುತ್ತಿದೆ," ಎಂದು ಸ್ಥಳೀಯ ಹೋಟೆಲ್ ಮಾಲೀಕರು ತಮ್ಮ ನೋವನ್ನು ಹೊರಹಾಕಿದರು. ಗ್ರಾಹಕರ ಸಂಕಷ್ಟ: ಸಾಮಾನ್ಯ ಗ್ರಾಹಕರಿಗೂ ಇದೇ ಪರಿಸ್ಥಿತಿ. "ದಿನನಿತ್ಯದ ಅಡುಗೆಗೆ ಅನಿಲ ಸಿಗದೆ ಸಂಕಷ್ಟ ಅನುಭವಿಸುತ್ತಿದ್ದೇವೆ. ಸರ್ಕಾರ ತಕ್ಷಣ ಕ್ರಮ ಕೈಗೊಂಡು ಸಮಸ್ಯೆ ಪರಿಹ–ರಿಸಬೇಕು," ಎಂದು ಹಲವರು ಒತ್ತಾಯಿಸಿದರು. ಈ ಅನಿಲ ಸಂಕಷ್ಟವು ಕೇವಲ ಪೂರೈಕೆಯ ಸಮಸ್ಯೆಯಾಗಿಲ್ಲ, ಅದು ಜನರ ಬದುಕಿನ ಹಗ್ಗವನ್ನು ಕಟ್ಟಿ ಹಿಡಿದಂತಾಗಿದೆ. ಸರ್ಕಾರ ತ್ವರಿತ ಕ್ರಮ ಕೈಗೊಂಡು ಪೂರೈಕೆಯನ್ನು ಸುಧಾರಿಸದಿದ್ದರೆ, ಮಸ್ಕಿಯ ಜನರ ಬದುಕು ಇನ್ನಷ್ಟು ಕಠಿಣವಾಗುವ ಸಾಧ್ಯತೆ ಇದೆ.

ವರದಿ: ಸುರೇಶ್ ಬಳಗಾನೂರು

# ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ವಿದ್ಯಾ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳ ಅದ್ಭುತ ಸಾಧನೆ

**ನೈಜ್ಯ ದೆಸೆ ನ್ಯೂಸ್**




**ಸಿಂಧನೂರು: ಭಾರತ್ ಸ್ಕೌಟ್ ಮತ್ತು ಗೈಡ್ ಕರ್ನಾಟಕ ರಾಜ್ಯ ಸಂಸ್ಥೆ, ಬೆಂಗಳೂರು ಇವರ ವತಿಯಿಂದ ದೇವದುರ್ಗದ ಡಾನ್ ಬಾಸ್ಕೋ ಶಾಲೆಯಲ್ಲಿ 2025ರ ಡಿಸೆಂಬರ್ 19 ಮತ್ತು 20ರಂದು ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.**

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಸ್ಕೌಟ್ ಹಾಗೂ ಗೈಡ್ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯ, ಶಿಸ್ತು, ನಾಯಕತ್ವ ಹಾಗೂ ಸೇವಾ ಮನೋಭಾವವನ್ನು ಪ್ರದರ್ಶಿಸಿದರು. ಈ ರಾಜ್ಯ ಮಟ್ಟದ ಶಿಬಿರದಲ್ಲಿ ವಿದ್ಯಾ ಪಬ್ಲಿಕ್ ಶಾಲೆಯ 12 ಗೈಡ್ ವಿದ್ಯಾರ್ಥಿಗಳು ಹಾಗೂ 6 ಸ್ಕೌಟ್ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಪರೀಕ್ಷೆಯ ವಿವಿಧ ಹಂತಗಳಾದ ಶಿಬಿರ ಜೀವನ, ಗುಂಪು ಚಟುವಟಿಕೆಗಳು, ಪ್ರಾಯೋಗಿಕ ಪರೀಕ್ಷೆಗಳು, ಸಮಾಜ ಸೇವಾ ಚಟುವಟಿಕೆಗಳು ಹಾಗೂ ನಾಯಕತ್ವ ಕೌಶಲ್ಯಗಳ ಮೌಲ್ಯಮಾಪನದ ನಂತರ 11 ಗೈಡ್ ವಿದ್ಯಾರ್ಥಿಗಳು ಹಾಗೂ 5 ಸ್ಕೌಟ್ ವಿದ್ಯಾರ್ಥಿಗಳು ಯಶಸ್ವಿಯಾಗಿ ತೇರ್ಗಡೆಯಾಗಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ರಾಜ್ಯ ಪುರಸ್ಕಾರ ಪರೀಕ್ಷೆ ಸ್ಕೌಟ್ ಮತ್ತು ಗೈಡ್ ಚಳವಳಿಯಲ್ಲಿ ಅತ್ಯಂತ ಮಹತ್ವದ ಹಂತವಾಗಿದ್ದು, ವಿದ್ಯಾರ್ಥಿಗಳಲ್ಲಿ ಶಿಸ್ತು, ದೇಶಭಕ್ತಿ, ಸಹಕಾರ ಮನೋಭಾವ, ಆತ್ಮವಿಶ್ವಾಸ ಹಾಗೂ ಸಮಾಜದತ್ತ ಸೇವಾ ದೃಷ್ಟಿಕೋಣವನ್ನು ಬೆಳೆಸುವ ಉದ್ದೇಶ ಹೊಂದಿದೆ. ವಿದ್ಯಾ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳ ಈ ಸಾಧನೆ ಶಾಲೆಯ ಶಿಕ್ಷಣದ ಜೊತೆಗೆ ವ್ಯಕ್ತಿತ್ವ ವಿಕಾಸ ಚಟುವಟಿಕೆಗಳಿಗೆ ನೀಡಲಾಗುತ್ತಿರುವ ಆದ್ಯತೆಯನ್ನು ತೋರಿಸುತ್ತದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಕಾರ್ಯದರ್ಶಿ ಶ್ರೀ ನರೇಂದ್ರನಾಥ್ ಅಭಿನಂದನೆ ಸಲ್ಲಿಸಿ, ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಶಿಕ್ಷಕರ ಮಾರ್ಗದರ್ಶನವೇ ಈ ಯಶಸ್ಸಿಗೆ ಕಾರಣವೆಂದು ಹೇಳಿದರು. ಗೈಡ್ ಕ್ಯಾಪ್ಟನ್, ಶಿಕ್ಷಕ ವೃಂದ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿ ರಾಷ್ಟ್ರ ಮಟ್ಟದಲ್ಲಿಯೂ ಹೆಚ್ಚಿನ ಸಾಧನೆ ಮಾಡುವ ವಿಶ್ವಾಸ ವ್ಯಕ್ತಪಡಿಸಿದರು. ಶಾಲಾ ಆಡಳಿತ ಮಂಡಳಿ, ಪೋಷಕರು ಹಾಗೂ ಸಾರ್ವಜನಿಕರು ವಿದ್ಯಾರ್ಥಿಗಳ ಈ ಸಾಧನೆಯನ್ನು ಶ್ಲಾಘಿಸಿ ಅಭಿನಂದನೆ ಸಲ್ಲಿಸಿದ್ದಾರೆ.

## ಮಸ್ಕಿ ತಾಲೂಕಿನಲ್ಲಿ ಕೆ.ಎ.ಎಸ್. ಮೋಟಾರ್ಸ್ ಶೋರೂಂ ಉದ್ಘಾಟಿಸಿದ ಮಾಜಿ ಸಚಿವ ವೆಂಕಟರಾವ್ ನಾಡಗೌಡ



**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ತಾಲೂಕಿನ ವ್ಯಾಪಾರ ಹಾಗೂ ವಾಹನ ಸೇವಾ ಕ್ಷೇತ್ರಕ್ಕೆ ಮತ್ತೊಂದು ಹೊಸ ಅಧ್ಯಾಯವಾಗಿ ಕೆ.ಎ.ಎಸ್. ಮೋಟಾರ್ಸ್ ನೂತನ ಸಂಸ್ಥೆಯ ಉದ್ಘಾಟನಾ ಕಾರ್ಯಕ್ರಮ ಇಂದು ಸಂಭ್ರಮದ ವಾತಾವರಣದಲ್ಲಿ ನೆರವೇರಿತು.**

ಕಾರ್ಯಕ್ರಮದಲ್ಲಿ (KOF) ರಾಜ್ಯಾಧ್ಯಕ್ಷರು ಹಾಗೂ ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ ಮುಖ್ಯ ಅತಿಥಿಯಾಗಿ ಭಾಗವಹಿಸಿ ಸಂಸ್ಥೆಯನ್ನು ಉದ್ಘಾಟಿಸಿ ಮಾಲೀಕರಿಗೆ ಹಾಗೂ ಸಿಬ್ಬಂದಿಗೆ ಶುಭಾಶಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯಮ ಹಾಗೂ ವ್ಯಾಪಾರ ವೃದ್ಧಿಯಾಗುತ್ತಿರುವುದು ಸಂತಸದ ವಿಚಾರವಾಗಿದ್ದು, ಇಂತಹ ಹೊಸ ಸಂಸ್ಥೆಗಳು ಸ್ಥಳೀಯ ಜನ–ರಿಗೆ ಉತ್ತಮ ಸೇವೆ ನೀಡುವುದರ ಜೊತೆಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಹೇಳಿದರು. ಹೊಸ ಉದ್ಯಮ ಆರಂಭಿಸುವ ಯುವ ಉದ್ಯಮಿಗಳನ್ನು ಪ್ರೋತ್ಸಾಹಿಸುವುದು ಸಮಾಜದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಕೆ.ಎ.ಎಸ್. ಮೋಟಾರ್ಸ್ ಸಂಸ್ಥೆಯಲ್ಲಿ ಗ್ರಾಹಕರಿಗೆ ಗುಣಮಟ್ಟದ ವಾಹನ ಮಾರಾಟ, ಸೇವೆ ಹಾಗೂ ನಿರ್ವಹಣಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶ ಹೊಂದಿರುವುದಾಗಿ ಸಂಸ್ಥೆಯ ಪ್ರತಿನಿಧಿಗಳು ತಿಳಿಸಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿ ಸ್ಥಳೀಯ ಗಣ್ಯರು, ವ್ಯಾಪಾರಸ್ಥರು, ಸ್ನೇಹಿತರು, ಅಭಿಮಾನಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಸಂಸ್ಥೆಯ ಯಶಸ್ಸಿಗೆ ಶುಭ ಹಾರೈಸಿದರು. ಕಾರ್ಯಕ್ರಮವು ಸರಳ ಹಾಗೂ ಸಂಭ್ರಮದ ವಾತಾವರಣದಲ್ಲಿ ನೆರವೇರಿತು.

# ಬೇಸಿಗೆ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಡೆಗಟ್ಟಲು ಅಧಿಕಾರಿಗಳೊಂದಿಗೆ ಸಮಗ್ರ ಪರಿಶೀಲನಾ ಸಭೆ ನಡೆಸಿದ ಸಚಿವ ಎನ್ ಎಸ್ ಬೋಸರಾಜು

**ನೈಜ್ಯ ದೆಸೆ ನ್ಯೂಸ್**

**ಮಾನವಿ: ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಪ್ರವಾಸಿ ಮಂದಿರದಲ್ಲಿ ಇಂದು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ ಸಭಾ ನಾಯಕ ಶ್ರೀ ಎನ್.ಎಸ್. ಬೋಸರಾಜು ಮತ್ತು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರ ಅಧ್ಯಕ್ಷತೆಯಲ್ಲಿ ಮುಂಬರುವ ಬೇಸಿಗೆ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಡೆಗಟ್ಟುವ ಉದ್ದೇಶದಿಂದ ಅಧಿಕಾ–ರಿಗಳೊಂದಿಗೆ ಸಮಗ್ರ ಪರಿಶೀಲನಾ ಸಭೆ ನಡೆಯಿತು.**

ಸಭೆಯಲ್ಲಿ ಮಾತನಾಡಿದ ಸಚಿವರು, ಬೇಸಿಗೆ ಕಾಲ ಆರಂಭವಾಗುವ ಮುನ್ನವೇ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾ–ರಿಗಳಿಗೆ ಸೂಚಿಸಿದರು. ತುಂಗಭದ್ರಾ ಎಡದಂಡೆ ಕಾಲುವೆಯಿಂದ ಬಿಡುಗಡೆ ಮಾಡುತ್ತಿರುವ ನೀರನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕ್ಷೇತ್ರದ ಎಲ್ಲಾ ಕೆರೆಗಳನ್ನು ಭರ್ತಿ ಮಾಡುವ ಮೂಲಕ ಭೂಗರ್ಭ ಜಲಮಟ್ಟ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಶಾಸಕರಾದ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಮಾತನಾಡಿ, ಜನರಿಗೆ ಕುಡಿಯುವ ನೀರು ಒದಗಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಯಾವುದೇ ಗ್ರಾಮದಲ್ಲಿ




ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾ–ರಿಗಳು ಸ್ಥಳೀಯ ಮಟ್ಟದಲ್ಲಿ ನಿರಂತರ ಪರಿಶೀಲನೆ ನಡೆಸಬೇಕು ಎಂದು ಹೇಳಿದರು.

ಈಗಾಗಲೇ ಚಾಲ್ತಿಯಲ್ಲಿಲ್ಲದ ಕೊಳವೆಬಾವಿಗಳನ್ನು ತಕ್ಷಣ ದುರಸ್ತಿ ಮಾಡಿ, ಫ್ರೆಶಿಂಗ್ ಕಾರ್ಯ ಕೈಗೊಳ್ಳುವ ಮೂಲಕ ನೀರಿನ ಲಭ್ಯತೆ ಹೆಚ್ಚಿಸುವಂತೆ ಸೂಚಿಸಿದರು. ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಗಳು, ತಹಶೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಪುರಸಭೆ ಮತ್ತು ಪಟ್ಟಣ ಪಂಚಾಯತ್ ಮುಖ್ಯಾಧಿಕಾ–ರಿಗಳು ತಮ್ಮ ವ್ಯಾಪ್ತಿಯ ಪ್ರದೇಶಗಳಲ್ಲಿ ನೀರಿನ ಮೂಲಗಳ ಸ್ಥಿತಿಗತಿ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಭೆಯಲ್ಲಿ ನಿರ್ದೇಶನ ನೀಡಲಾಯಿತು. ನೀರಿನ ಸರಬರಾಜಿನಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಮತ್ತು ಶಾಸಕರು ಎಚ್ಚರಿಸಿದರು.

ತುಂಗಭದ್ರಾ ಎಡದಂಡೆ ಕಾಲುವೆಗೆ ನೀರು ಹರಿಸುವ ಸಂದರ್ಭಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಪೊಲೀಸ್ ಇಲಾಖೆ ಅಧಿಕಾರಿಗಳು ಸ್ಥಳೀಯ ಆಡಳಿತದೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸಬೇಕು ಎಂದು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ವಿ ಪಿಐ ಸೋಮಶೇಖರ್ ಕೆಂಚರೆಡ್ಡಿ ಅವರಿಗೆ ಸೂಚಿಸಲಾಯಿತು. ಈ ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಗಬೂರ್ ಸಾಬ್, ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಬಿ.ಕೆ. ಅಂಬರೇಶಪ್ಪ (ವಕೀಲರು), ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು. ಇಲ್ಲಿನ ಕುಲಪತಿ ಹುದ್ದೆಗೆ ಅರ್ಹತೆಯುಳ್ಳ ಪ್ರಾಧ್ಯಾಪಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವಿಶ್ವವಿದ್ಯಾಲಯ ಧನ ಸಹಾಯಗಳ ಆಯೋಗದ ಮಾರ್ಗಸೂಚಿಗಳು ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992 ರನ್ವಯ ಕನಿಷ್ಠ 10 ವರ್ಷಗಳ ಕಾಲ ಪ್ರಾಧ್ಯಾಪಕರ ಅಥ–ವಾ ತತ್ಸಮಾನ ಹುದ್ದೆಯ ಕಾರ್ಯಾನುಭವ ಹೊಂದಿರತಕ್ಕದ್ದು ಹಾಗೂ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವ ಇತ್ಯಾದಿ ವಿವರಗಳೊಂದಿಗೆ ವೆಬ್ ಸೈಟ್ www.ksoumysuru.ac.in ನಲ್ಲಿ ಲಭ್ಯವಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಸ್ವಯಂಘೋಷಣೆಯೊಂದಿಗೆ "ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ಪಿ.ಬಿ. ನಂ. 5033, ಲೋಕ ಭವನ, ಬೆಂಗಳೂರು–560001" ಇವ–ರಿಗೆ ದಿನಾಂಕ: 10.05.2026ರ ಸಂಜೆ 5.30ರೊಳಗೆ ತಲುಪುವಂತೆ ನಾಲ್ಕು ಪ್ರತಿಗಳಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಹಾಗೂ ಅರ್ಜಿಯ soft copy email : us.university.rb@karnataka.gov.in ಕಳುಹಿಸುವುದು.

## ಶ್ರೀ ರಾಮ ನವಮಿ ಶೋಭಾ ಯಾತ್ರೆಗೆ ನಾವದಗಿ ಶ್ರೀ ಚಾಲನೆ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ತಾಲೂಕಿನ ಬಿ.ಸಾಲವಾಡಗಿ ಗ್ರಾಮದಲ್ಲಿ ಮರ್ಯಾದ ಪುರುಷೋತ್ತಮ ಶ್ರೀ ರಾಮನ ಜನ್ಮದಿನದ ಅಂಗವಾಗಿ ಶ್ರೀರಾಮ ನವಮಿ ಉತ್ಸವ ಸಮಿತಿಯವರು ಹಮ್ಮಿಕೊಂಡ 4ನೇ ವರ್ಷದ ಶ್ರೀ ರಾಮನ ಭವ್ಯ ಶೋಭಾ ಯಾತ್ರೆಗೆ ನಾವದಗಿ ಬ್ರಹನ್ಮಠದ ಷ.ಬ್ರ. ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳು ಗುರುವಾರ ಸಂಜೆ ಚಾಲನೆ ನೀಡಿದರು.**

ಈ ಸಂದರ್ಭದಲ್ಲಿ ಅವರು ಮಾತನಾಡಿ ಮರ್ಯಾದ ಪುರುಷೋತ್ತಮ ಶ್ರೀ ರಾಮನ ಬದುಕಿನ ಉದಾತ್ತ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ



ಪ್ರಾಮಾಣಿಕ ಪ್ರಯತ್ನ ನಾವೆಲ್ಲರೂ ಮಾಡಬೇಕಾಗಿದೆ. ಸತತ ನಾಲ್ಕು ವರ್ಷಗಳಿಂದ ಇಲ್ಲಿಯ ಶ್ರೀರಾಮ ನವಮಿ ಸಮಿತಿಯವರು ಇಂಥಹ ಅದ್ಭುತವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿರುವುದು ಸಂತೋಷದ ವಿಷಯ ಅವರಿಗೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು.

ನಂತರ ಶ್ರೀ ರಾಮನ ಮೂರ್ತಿಯ ಭವ್ಯ ಶೋಭಾಯಾತ್ರೆ ಗ್ರಾಮದ ಅಗಸಿ ಹೆಬ್ಬಾಗಿಲದಿಂದ ಸಕಲ ವಾದ್ಯ ಮೇಳ ಬಾಜಾ ಡೊಳ್ಳು ಹಾಗೂ ಜಾನಪದ ಕಲಾ ತಂಡಗಳೊಂದಿಗೆ ಆರಂಭಗೊಂಡಿತು. ಮೆರವಣಿಗೆ ಉದ್ದಕ್ಕೂ ಯುವಕರು ಕೈಯಲ್ಲಿ ಭಗವಾ ಧ್ವಜ ಹಿಡಿದುಕೊಂಡು ಜೈ ಶ್ರೀ ರಾಮ್ ಎಂದು ಘೋಷಣೆಗಳನ್ನು ಕೂಗುತ್ತಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಅಲ್ಲಮ ಪ್ರಭು ದೇವಸ್ಥಾನಕ್ಕೆ ತಲುಪಿದರು. ನಂತರ ಗ್ರಾಮದಲ್ಲಿ ವೇದಿಕೆ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಬಸನಗೌಡ ಪಾಟೀಲ (ಯಡಿಯಾಪೂರ), ಗಣ್ಯರಾದ ರಾಜು ಗೌಡ ಅನಂತರೆಡ್ಡಿ, ಚಂದ್ರಶೇಖರ ಮೂಲಿಮನಿ, ಬಸನಗೌಡ ಅನಂತರೆಡ್ಡಿ, ಬಸವರಾಜ ದೇಸಾಯಿ, ಶೇಖರಗೌಡ ಯಾಳಗಿ, ಸಂಗನಗೌಡ ಯಾಳಗಿ ಹಾಗೂ ಯುವಕರು ಅಪಾರ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

## ಏ.7 ರಂದು ಪಟ್ಟಣಕ್ಕೆ ಶಂಕರ ಬಿದರಿ ನಿವೃತ್ತ ಐ.ಜಿ.ಪಿ.ರವರು ಆಗಮಿಸಲಿದ್ದಾರೆ: ಅರುಣಕುಮಾರ ಚಂದಾ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಕುಮಾರ ಚಂದಾ ಮಾತನಾಡಿ ಏ.5 ರಂದು ಬೆಳಿಗ್ಗೆ 11 ಕ್ಕೆ ಪಟ್ಟಣದ ಸಿದ್ಧರ್ಥ ಕಾಲೇಜಿನಲ್ಲಿ ನಡೆಯುವ ಬೇಸಿಗೆ ತರಬೇತಿ ಶಿಬಿರಕ್ಕೆ ಸಚಿವ ಎನ್.ಎಸ್.ಬೋಸರಾಜು ರವರು ಚಾಲನೆ ನೀಡಲಿದ್ದಾರೆ.**



ಏ.7 ರಂದು ಬೆಳಿಗ್ಗೆ ಮಾನ್ವಿ ಪಟ್ಟಣಕ್ಕೆ ಆಗಮಿಸುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು ರಾಜ್ಯಾಧ್ಯಕ್ಷರಾದ ಶಂಕರ ಬಿದರಿ ನಿವೃತ್ತ ಐ.ಜಿ.ಪಿ. ರವರನ್ನು ಸಮಾಜದಿಂದ ಭವ್ಯವಾಗಿ ಸ್ವಾಗತಿಸಲಾಗುವುದು ಶಂಕರ ಬಿದರಿರವರು ಮಾನ್ವಿ ಪಟ್ಟಣದಲ್ಲಿನ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಕಚೇರಿಗೆ ಭೇಟಿ ನೀಡಿ ಸದಸ್ಯರೊಂದಿಗೆ ಹಾಗೂ ಸಮಾಜದ ಗಣ್ಯರೊಂದಿಗೆ ಚರ್ಚೆ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 2 ಕ್ಕೆ ಹಿರಿಯ ವಕೀಲರಾದ ಸಿದ್ದಲಿಂಗಪ್ಪ ರವರ ನಿವಾಸದಲ್ಲಿ ಸಮಾಜದವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಸಂಜೆ 5ಕ್ಕೆ ತಾಲೂಕಿನ ಅಡವಿ ಅಮರೇಶ್ವರ ಗ್ರಾಮದಲ್ಲಿನ ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ 72 ನೇ ಜಾತ್ರ ಮಹೋತ್ಸವದ ಅಂಗವಾಗಿ ನಡೆಯುವ ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಶ್ರೀ ಡಾ.ಸಿದ್ದಲಿಂಗ ಮಹಾಸ್ವಾಮಿಗಳ ಗುರುವಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದ ಶ್ರೀ ತೊಂಟದಾರ್ಯ ಮಹಾಸ್ವಾಮಿಗಳಿಂದ ಮಹಾರಥೋತ್ಸವಕ್ಕೆ ಚಾಲನೆ ಹಾಗೂ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನ ಮಹಾಮಂಗಲ ಕಾರ್ಯಕ್ರಮ , ಜಾನುವಾರುಗಳ ಜಾತ್ರೆ ಅಂಗವಾಗಿ ಎತ್ತುಗಳಿಂದ ಭಾರ ಎಳೆಯುವ ಸ್ಪರ್ಧೆ ಏರ್ಪಡಿಸಲಾಗಿದೆ ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಶ್ರೀಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯಕರಿಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು, ತಾಲೂಕು ವೀರಶೈವಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್, ಗೌ.ಅಧ್ಯಕ್ಷರಾದ ಶ್ರೀಧರಸ್ವಾಮಿ,ತಿಮ್ಮರೆಡ್ಡಿ ಭೋಗವತಿ, ಜಗದೀಶ ಓತ್ತೂರು,ಗುರುಸಿದ್ದಪ್ಪ ಕಣ್ಣೂರು, ವೀರನಗೌಡ ವಕೀಲರು,ಮಲ್ಲನಗೌಡ ನಕ್ಕುಂದಿ ವಕೀಲರು.ಶಂಕರಪ್ಪ ಸೇರಿದಂತೆ ಸಮಾಜದ ಮುಖಂಡರು ಇದ್ದರು.

## ಕೆ.ಹೊಸಹಳ್ಳಿ ಗ್ರಾಮದ ಡೇರೆದ ನಾಗಲಿಂಗೇಶ್ವರ ಜಾತ್ರಾ ಮಹೋತ್ಸವ





**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ತಾಲೂಕಿನ ತುರವಿಹಾಳ ಸಮೀಪದ ಕೆ ಹೊಸಹಳ್ಳಿ ಗ್ರಾಮದಲ್ಲಿ ಗುರುವಾರ ಡೇರೆದ ನಾಗಲಿಂಗೇಶ್ವರ ಜಾತ್ರಾ ಮಹೋತ್ಸವದ ಅದ್ದೂ–ರಿಯಾಗಿ ಜರುಗಿತು.ಜಾತ್ರಾ ಮಹೋತ್ಸವ ಅಂಗವಾಗಿ ಮಹಿಳೆಯರ ಕುಂಭಕಳಸ ಡೊಳ್ಳು,ವಾದ್ಯಗಳೊಂದಿಗೆ ಭಾಗವಹಿಸಿ ಸಂಭ್ರಮಿಸಿದರು.**

ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 101 ಕುಂಭಗಳಿಗೆ ಗ್ರಾಮದ ಪೂಜ್ಯರಿಂದ ಪೂಜೆ ಸಲ್ಲಿಸಿ ಜಾತ್ರೆಗೆ ಚಾಲನೆ ನೀಡಲಾಯಿತು. ವಿಶೇಷ ಉತ್ಸಾಹದೊಂದಿಗೆ ಪಾಲ್ಗೊಂಡ ಮಹಿಳೆಯರು ಗ್ರಾಮದ ಸುರಕ್ಷೆ ಮತ್ತು ಸಮೃದ್ಧಿಯ ಸಂಕಲ್ಪದೊಂದಿಗೆ ಪಲ್ಲಕ್ಕಿ ಉತ್ಸವ,ರಥದ ಕಳಸವನ್ನು ಪೂಜ್ಯರ ನೇತೃತ್ವದಲ್ಲಿ 101 ಕುಂಭಗಳನ್ನು ಗ್ರಾಮದಲ್ಲಿ ಭವ್ಯ ಮೆರವಣಿಗೆಯ ಮೂಲಕ ಹೊತ್ತುಕೊಂಡು ಬಂದು ಜಾತ್ರಾ ಮಹೋತ್ಸವಕ್ಕೆ ಮೆರುಗು ತಂದರು.ಸಾಯಂಕಾಲ ಕಳಸ,ಪಲ್ಲಕ್ಕಿ ಉತ್ಸವದೊಂದಿಗೆ ಶ್ರೀನಾಗಲಿಂಗೇಶ್ವರ ದೇವಸ್ಥಾನ ತಲುಪುತ್ತಿದ್ದಂತೆ ರಥ–ೋತ್ಸವವು ಪ್ರಾರಂಭವಾಯಿತು.

ಗುರುವಾರ ಬೆಳಗ್ಗೆಯಿಂದಲೇ ಆರಂಭವಾದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರೆದಿದ್ದ ಭಕ್ತರನ್ನು ಮಂತ್ರ ಮುಗ್ಧರನ್ನಾಗಿಸಿದರೆ ಗ್ರಾಮದ ಆರಾಧ್ಯ ದೈವ ನಾಗಲಿಂಗೇಶ್ವರ ಮೂರ್ತಿಗೆ ಮಾಡಲಾಗಿದ್ದ ಅಭಿಷೇಕ, ಪುಷ್ಪರ್ಚನೆ ಮತ್ತು ಬಣ್ಣ ಬಣ್ಣದ ಲೈಟ್ ಗಳಿಂದ ಕಂಗೊಳಿಸುತ್ತಿದ್ದ ದೇವಸ್ಥಾನ ಬಂದ ಭಕ್ತಾದಿಗಳನ್ನು ಕೈಬೀಸಿ ಕರೆಯುವಂತಿತ್ತು. ಸಾವಿರಾರು ಭಕ್ತಾದಿಗಳು ರಥಕ್ಕೆ ಹೂ ಹಣ್ಣು ಉತ್ತತ್ತಿ ಎಸೆದು ದೇವರಿಗೆ ಹರಕೆಗಳನ್ನು ಹೊತ್ತು ಧಿರ್ಘದಂಡ ನಮಸ್ಕಾರ ಹಾಕುವ ಮೂಲಕ ತಮ್ಮ ಇಷ್ಟಾರ್ಥಗಳ ಬೇಡಿಕೆಗಳನ್ನು ಈಡೇ–ರಿಸುವಂತೆ ಮೊರೆ ಇಟ್ಟರು. ವಿಶೇಷವಾಗಿ ದೇವಸ್ಥಾನ ವತಿಯಿಂದ ಜಾತ್ರೆಗೆ ಆಗಮಿಸಿದ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಯಿತು. ಈ ಸಂಧರ್ಭದಲ್ಲಿ ಊರಿನ ಪರಮ ಪೂಜ್ಯರು,ಗುರು ಹಿರಿಯರು, ಮಹಿಳೆಯರು,ಯುವಕ ಯುವ ತಿಯರು ಹಾಗೂ ಪೊಲೀಸ್ ಸಿಬ್ಬಂದಿಗಳು,ಜೆಸ್ಕಾಂ ಸಿಬ್ಬಂದಿಗಳು,ಕೆ. ಹೊಸಹಳ್ಳಿ ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರು,ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ ಸಂಭ್ರಮದಿಂದ ಪಾಲ್ಗೊಂಡಿದ್ದರು.

## ತಾಲೂಕು ಬಸವ ಕೇಂದ್ರದ ತಾಲೂಕ ಘಟಕದ ನೂತನ ಪದಾಧಿಕಾರಿಗಳ ಅಯ್ಕೆ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದ ಬಸವ ಕೇಂದ್ರದ ತಾಲೂಕ ಘಟಕದ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು ಬಸವ ಕೇಂದ್ರದ ತಾಲೂಕ ಘಟಕದ ತಾ,ಅಧ್ಯಕ್ಷರಾಗಿ ಶರಣಬಸವ ಬೆಟ್ಟದೂರು, ಗೌರವ ಅಧ್ಯಕ್ಷರಾಗಿ ಡಾ. ಬಸವ ಪ್ರಭು ಪಾಟೀಲ್, ಉಪಾಧ್ಯಕ್ಷರಾಗಿ ಶಂಭನಗೌಡ ಹರವಿ, ವೈ. ಸುರೇಶ ಬಲ್ಲಟಗಿ ,ಪರಮೇಶ್ ಹರನಹಳ್ಳಿ, ಪ್ರಧಾನ ಕಾರ್ಯದರ್ಶಿಗಳಾಗಿ ಲೋಕೇಶ್** ನಾಯ್ಕರ್, ಲಕ್ಷ್ಮಣ್ ಜಾನೇಕಲ್,



ಸಂಘಟನಾ ಕಾರ್ಯದರ್ಶಿಗಳಾಗಿ ಬಸವರಾಜ್ ಸಂಕೇಶ್ವರ್, ಎಂ. ಅಮರೇಶ್ ಬೆಟ್ಟದೂರು, ಮಹಾಂತೇಶ್ ಗವಿಗಟ್. ಖಜಾಂಚಿಯಾಗಿ ತಿಪ್ಪಣ್ಣ ಹೊಸಮನಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶಿವಕುಮಾರ್ ರಾಮದುರ್ಗ, ಚನ್ನಬಸವಪ್ಪ ಮಲ್ಕಮದಿನ್ನಿ. ಉಮೇಶ್, ಚನ್ನಬಸವ ಮಾಡಗಿರಿ, ತ್ರಯಂಬಕೇಶ್ ಮೇದ, ಈರಯ್ಯ ಮೇದ, ಹಡಪದ ಅಮರೇಶ್, ಸಂಜೀವಪ್ಪ ಶಿಕ್ಷಕರು, ಶ್ರೀನಿವಾಸ್ ಅನಂತಾರಾಮುಲು, ರಾಮು ಹೊಳೆಯಪ್ಪನವರ, ಉದಯ್ ಶಂಕರ್, ಗವಿಗೇಟ್ ಅಮರೇಶ್,ಸಂತೋಷ್ ಹಾಗೂ ಗೌರವ ಸಲಹೆಗಾರರಾಗಿ ನಾಗರಾಜ್ ಬಳಿಗಾರ್, ದೇವೇಂದ್ರ ದುರ್ಗ , ಚಂದ್ರಶೇಖರ್ ಸುವರ್ಣ ಗಿರಿ ಮಠ , ಮಹಾಂತೇಶ ಸ್ವಾಮಿ ರೌಡೂರ್ , ಶರಣಬಸವ ನೀರ ಮಾನ್ವಿ , ಗುಮ್ಮ ಬಸವರಾಜ್ ,ಉಮೇಶ್ ಚಿಮಲಾಪುರ್ ,ಎಂ. ಚನ್ನಬಸವ ಬೆಟ್ಟದೂರ್, ನೀಲಕಂಠ ಮೇದ, ಜಿ.ಎಂ.ರಂಗಪ್ಪ . ಡಿ.ಜಿ.ಕರ್ಕಿಹಳ್ಳಿ . ಶೇಖರಪ್ಪ ವಕೀಲರು . ಮಹಮ್ಮದ್ ಮುಜೀಬ್ ಅಯ್ಕೆ ಮಾಡಲಾಯಿತು.

## ಸಾವಿರಾರು ಭಕ್ತರ ಮಧ್ಯೆ ದೊಡ್ಡ ಹನುಮಂತ ದೇವರ ಜಾತ್ರೋತ್ಸವ ಅದ್ಧೂರಿ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಪಟ್ಟಣದ ಆರಾಧ್ಯ ದೈವವಾದ ದೊಡ್ಡ ಹನುಮಂತ ದೇವರ ವಾರ್ಷಿಕ ಜಾತ್ರಾಮಹೋತ್ಸವವು ಭಕ್ತಿ, ಸಂಭ್ರಮ ಹಾಗೂ ಸಾಂಪ್ರದಾಯಿಕ ವೈಭವದೊಂದಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇ–ರಿತು.**

**ಜಾತ್ರಾಮಹೋತ್ಸವದ ಅಂಗವಾಗಿ ಗುರುವಾರ ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ಆರಂಭಗೊಂಡವು.**

ದೊಡ್ಡ ಹನುಮಂತ ದೇವ–ರಿಗೆ ಅಭಿಷೇಕ, ಅಲಂಕಾರ, ಮಹಾ



ಮಂಗಳಾರತಿ ನೆರವೇರಿಸಲಾಯಿತು. ಬೆಳಿಗ್ಗೆ 8 ಗಂಟೆಗೆ ಪಲ್ಲಕ್ಕಿ ಉತ್ಸವ ನಡೆಯುತ್ತಿದ್ದು, ಭಕ್ತರು ಭಜನೆ, ಜಯಘೋಷಗಳೊಂದಿಗೆ ದೇವರ ದರ್ಶನ ಪಡೆದರು. ಪ್ರತಿ ವರ್ಷದ ಸಂಪ್ರದಾಯದಂತೆ ಅಂಬಾಭವಾನಿ ದೇವಿಯ ಉಡಿತುಂಬುವ ಕಾರ್ಯಕ್ರಮ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇ–ರಿತು. ಭಕ್ತರು ಕುಟುಂಬ ಸಮೇತರಾಗಿ ಭಾಗವಹಿಸಿ ಹರಕೆ ಸಲ್ಲಿಸಿದರು. ಸಂಜೆ 7 ಗಂಟೆಗೆ ಹನುಮಂತ ದೇವರ ಉತ್ಸವ ಮೂರ್ತಿ ಹಾಗೂ ರಥಕ್ಕೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.


ಡೊಳ್ಳು, ತಾಳ, ಭಾಜಾ–ಭಜಂತ್ರಿಗಳ ನಾದ, ಭಕ್ತರ ಜಯಘೋಷಗಳ ನಡುವೆ ರಥೋತ್ಸವವು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ರಥೋತ್ಸವದ ವೇಳೆ ದೇವಸ್ಥಾನ ಸಮಿತಿ ಸದಸ್ಯರು, ಗಣ್ಯರು, ಮಹಿಳೆಯರು, ಯುವಕರು ಹಾಗೂ ಮಕ್ಕಳು ಸೇರಿದಂತೆ ಸಾವಿರಾರು ಭಕ್ತರು ಪಾಲ್ಗೊಂಡು ಜಾತ್ರೋತ್ಸವಕ್ಕೆ ಭಕ್ತಿ ಮೆರಗು ನೀಡಿದರು. ಭಕ್ತರಿಗೆ ಅನ್ನಸಂತರ್ಪಣೆ ಹಾಗೂ ಪ್ರಸಾದ ವಿತರಣೆ ವ್ಯವಸ್ಥೆ ಮಾಡಲಾಗಿತ್ತು. ಜಾತ್ರೋತ್ಸವದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಹಬ್ಬದ ವಾತಾವರಣ ನಿರ್ಮಾಣಗೊಂಡಿದ್ದು, ಪೊಲೀಸ್ ಇಲಾಖೆ ಮತ್ತು ಸ್ಥಳೀಯ ಆಡಳಿತದಿಂದ ಸೂಕ್ತ ಭದ್ರತಾ ಹಾಗೂ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿತ್ತು.

## ಗಣತಿದಾರರ ಮತ್ತು ಮೇಲ್ವಿಚಾರಕರ ಮೂರು ದಿನಗಳ ತರಬೇತಿ ಕಾರ್ಯಾಗಾರ ಚಾಲನೆ ನೀಡಿದ ಸಚಿವ ಎನ್ ಎಸ್ ಬೋಸರಾಜು

**ನೈಜ್ಯ ದೆಸೆ ನ್ಯೂಸ್**

**ಮಾನವಿ: ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಕಾಕತಿಯ ಶಾಲೆಯಲ್ಲಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ವತಿಯಿಂದ 2027ರ ಭಾರತ್ ಜನಗಣತಿ ಕಾರ್ಯಕ್ಕೆ ಸಂಬಂಧಿಸಿದಂತೆ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮವು ಉತ್ಸಾಹಭರಿತವಾಗಿ ನಡೆಯಿತು.**

ದಿನಾಂಕ 3, 4 ಮತ್ತು 10 ರಂದು ನಡೆಯುತ್ತಿರುವ ಈ ತರಬೇತಿ ಕಾರ್ಯಾಗಾರವನ್ನು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರಾದ ಶ್ರೀ ಎನ್.ಎಸ್. ಬೋಸರಾಜು ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಭೇಟಿ ನೀಡಿ ವೀಕ್ಷಿಸಿ ಅಧಿಕೃತ ಚಾಲನೆ ನೀಡಿದರು. ಸಚಿವರು ಮಾತನಾಡಿ, ಭಾರತ್ ಜನಗಣತಿ ದೇಶದ ಆಡಳಿತ ವ್ಯವಸ್ಥೆಯ ಅತಿ ಮಹತ್ವದ ಪ್ರಕ್ರಿಯೆಯಾಗಿದ್ದು, ಜನಸಂಖ್ಯೆ, ಸಾಮಾಜಿ–ಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಕುರಿತು ಸಮಗ್ರ ಮಾಹಿತಿಯನ್ನು ಸಂಗ್ರಹಿಸುವ ಮೂಲಕ ಸರ್ಕಾರದ ಯೋಜನೆಗಳ ರೂಪುರೇಷೆಗಳನ್ನು



ಸಿದ್ಧಪಡಿಸಲು ನೆರವಾಗುತ್ತದೆ ಎಂದು ಹೇಳಿದರು.

ಗಣತಿದಾರರು ನಿಖರತೆ, ಪ್ರಾಮಾಣಿಕತೆ ಹಾಗೂ ಸಮಯಪಾಲನೆಯೊಂದಿಗೆ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ತಾಲೂಕು ದಂಡಾಧಿಕಾರಿಗಳಾದ ಭೀಮರಾಯ ರಾಮಸಮುದ್ರ ಅವರು ತರಬೇತಿ ಕಾರ್ಯಾಗಾರದ ಉದ್ದೇಶ, ಗಣತಿ ಕಾರ್ಯದ ಹಂತಗಳು, ಮನೆಮನೆ ಸಮೀಕ್ಷೆ ವಿಧಾನ, ಆನ್‌ಲೈನ್ ಡೇಟಾ ದಾಖಲಾತಿ ಹಾಗೂ ನಾಗರಿಕರೊಂದಿಗೆ ಸಮರ್ಪಕ ಸಂವಹನ ನಡೆಸುವ ವಿಧಾನಗಳ ಕುರಿತು ಸಚಿವರು ಮತ್ತು ಶಾಸಕರಿಗೆ ವಿವರಿಸಿದರು. ತರಬೇತಿಯ ಮೂಲಕ ಸಿಬ್ಬಂದಿಗೆ ಕಾರ್ಯದ ಬಗ್ಗೆ ಆತ್ಮವಿಶ್ವಾಸ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದ ವೇಳೆ ಅಂಗನವಾಡಿ ಕಾರ್ಯಕರ್ತರು ಸಚಿವರಿಗೆ ಮನವಿ ಸಲ್ಲಿಸಿ, ಬೇಸಿಗೆ ರಜೆ ಅವಧಿಯಲ್ಲಿಯೂ ಜನಗಣತಿ ಕಾರ್ಯಕ್ಕೆ ನಿಯೋಜನೆ ಮಾಡಲಾಗುತ್ತಿರುವುದ–ರಿಂದ ತಮ್ಮಗೆ ಇರುವ ವಿಶ್ರಾಂತಿ ಅವಧಿ



ಕಡಿಮೆಯಾಗುತ್ತಿದೆ ಎಂದು ತಿಳಿಸಿದರು.

ಸಚಿವರು ಪ್ರತಿಕ್ರಿಯಿಸಿ, ಸರ್ಕಾರದ ಆದೇಶಗಳನ್ನು ಎಲ್ಲರೂ ಗೌರವಿಸಿ ಪಾಲಿಸಬೇಕು. ರಾಷ್ಟ್ರದ ಅಭಿವೃದ್ಧಿಗೆ ಅಗತ್ಯವಾದ ಈ ಕಾರ್ಯದಲ್ಲಿ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿಕೊಂಡರು. ಶಾಸಕರಾದ ಶ್ರೀ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಮಾತನಾಡಿ, ಜನಗಣತಿ ಕಾರ್ಯವು ಭವಿಷ್ಯದ ಅಭಿವೃದ್ಧಿ ಯೋಜನೆಗಳಿಗೆ ಆಧಾರವಾಗುವ ಮಹತ್ವದ ಕಾರ್ಯವಾಗಿದ್ದು, ಸಾರ್ವಜನಿಕರ ಸಹಕಾರದೊಂದಿಗೆ ಯಶಸ್ವಿಯಾಗಿ ಪೂರ್ಣಗೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಬಿ.ಕೆ. ಅಂಬರೇಶಪ್ಪ ವಕೀಲರು, ಮಾಜಿ ನಗರಸಭೆ ಸದಸ್ಯರಾದ ಶಿವಮೂರ್ತಿ, ಅಮರೇಗೌಡ ಹಂಚಿನಾಳ, ಗುಡಿದಿನ್ನಿ ಶರಣಯ್ಯ ನಾಯಕ್, ದೇವೇಂದ್ರಪ್ಪ ಬೊಮ್ಮನಾಳ, ಸತ್ತಾರ್ ಬಂಗ್ಲೆವಾಲೆ, ತಾಲೂಕು ಶಿಕ್ಷಣಾಧಿಕಾ–ರಿಗಳಾದ ಚಂದ್ರಶೇಖರ್ ದೊಡ್ಡಮನಿ, ಪುರಸಭೆ ಮುಖ್ಯಾಧಿಕಾರಿಗಳಾದ ಪರಶುರಾಮ್ ದೇವಮಾನೇ, ಗ್ರೇಡ್–2 ತಹಸೀಲ್ದಾರ್ ಅಬ್ದುಲ್ ವಾಹಿದ್ ಹುಸೇನ್, ಪುರಸಭೆ ವ್ಯಾಪ್ತಿಯ ಮಾಸ್ಟರ್ ಟ್ರೈಲರ್ ಗಳಾದ ವಾಲಿಬಾಬು ಮತ್ತು ಡಾಕ್ಟರ್ ಸೈಯದ್ ಮುಜಿಬ್ ಅಹಮದ್, ಪಿಐ ಸೋಮಶೇಖರ್ ಕೆಂಚರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಗಣತಿದಾರರು ಉಪಸ್ಥಿತರಿದ್ದರು. ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ ಗಣತಿದಾರರು ಮತ್ತು ಮೇಲ್ವಿಚಾರಕರು ಪ್ರಾಯೋಗಿಕ ತರಬೇತಿಯನ್ನು, ಪುರಸಭೆ ವ್ಯಾಪ್ತಿಯ ಮಾಸ್ಟರ್ ಟ್ರೈಲರ್ ಗಳಾದ ವಾಲಿಬಾಬು ಮತ್ತು ಡಾಕ್ಟರ್ ಸೈಯದ್ ಮುಜಿಬ್ ಅಹಮದ್ , ಅವರು ತರಬೇತಿಯನ್ನು ನೀಡಿದರು ನಂತರ ಮಾದರಿ ಸಮೀಕ್ಷೆ ಹಾಗೂ ಮಾಹಿತಿ ಸಂಗ್ರಹಣೆಯ ವಿಧಾನಗಳನ್ನು ಅಭ್ಯಾಸ ಮಾಡಿದರು. ಜನಗಣತಿ ಕಾರ್ಯವನ್ನು ನಿಖರವಾಗಿ ಮತ್ತು ಯಶಸ್ವಿಯಾಗಿ ಪೂರ್ಣಗೊಳಿಸಲು ಅಗತ್ಯವಾದ ಎಲ್ಲ ಸಿದ್ಧತೆಗಳನ್ನು ಜಿಲ್ಲಾಡಳಿತ ಕೈಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B Tech ಬಯೋಸೈನ್ಸ್

B Tech ಬಯೋಸೈನ್ಸ್ (Bio Science/Biotechnology) ಅಥವಾ ಜೈವಿಕ ತಂತ್ರಜ್ಞಾನವು 4 ವರ್ಷಗಳ (8 ಸೆಮಿಸ್ಟರ್) ಪದವಿಪೂರ್ವ ಎಂಜಿನಿಯರಿಂಗ್ ಕೋರ್ಸ್ ಆಗಿದೆ. ಇದು ಜೀವಶಾಸ್ತ್ರದ ತತ್ವಗಳನ್ನು ತಾಂತ್ರಿಕತೆ (Engineering) ಮತ್ತು ಕಂಪ್ಯೂಟರ್ ಸೈನ್ಸ್‌ನೊಂದಿಗೆ ಸಂಯೋಜಿಸಿ ಆರೋಗ್ಯ, ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಅನ್ವಯಿಸುತ್ತದೆ. ಈ ಕೋರ್ಸ್ ಓದಲು PUC/12ನೇ ತರಗತಿಯಲ್ಲಿ PCB (ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ) ಅಥವಾ ಕಅಒ ನಲ್ಲಿ ಕನಿಷ್ಠ 50% ಅಂಕಗಳು ಕಡ್ಡಾಯ. ಬಿ.ಟೆಕ್ ಬಯೋಸೈನ್ಸ್/ಬಯೋಟೆಕ್ನಾಲಜಿ ಕೋರ್ಸ್ ವಿವರಗಳು: ಕೋರ್ಸ್ ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ: 12ನೇ ತರಗತಿ (ವಿಜ್ಞಾನ – PCB/PCM). ಪ್ರಮುಖ ವಿಷಯಗಳು: ಜೀವರಸಾಯನಶಾಸ್ತ್ರ (Biochemistry), ಸೂಕ್ಷ್ಮಜೀವಿಯ ವಿಜ್ಞಾನ (Microbiology), ಕೋಶ ಜೀವಶಾಸ್ತ್ರ (Cell Biology), ಜೆನೆಟಿಕ್ಸ್ (Genetics), ಬಯೋ–ಪ್ರೊಸೆಸ್ ಎಂಜಿನಿಯರಿಂಗ್, ಮತ್ತು ಬಯೋಇನ್ಫರ್ಮ್ಯಾಟಿಕ್ಸ್. ಉದ್ಯೋಗಾವಕಾಶಗಳು: ಫಾರ್ಮಾ ಕಂಪನಿಗಳು, ಬಯೋಟೆಕ್ ಸಂಸ್ಥೆಗಳು, ಸಂಶೋಧನಾ ಪ್ರಯೋಗಾಲಯಗಳು, ಆಹಾರ ಸಂಸ್ಕರಣಾ ಉದ್ಯಮಗಳು ಮತ್ತು ಕೃಷಿ ವಲಯ. ಮುಖ್ಯ ಪ್ರವೇಶ ಪರೀಕ್ಷೆಗಳು: KCET, JEE Main, COMEDK, Chanakya University. ಅಧ್ಯಯನದ ಹಂತಗಳು: ಮೊದಲ ವರ್ಷ: ಇಂಜಿನಿಯರಿಂಗ್ ಬೇಸಿಕ್ಸ್ (ಋಢಿಛಿ, ಆುಜಟಖುಣಡಿಥಿ, ಒಚಿಣಃ). ಎರಡನೇ ವರ್ಷ: ಮೂಲಭೂತ ಬಯಾಲಜಿ ವಿಷಯಗಳು. ಮೂರನೇ ವರ್ಷ: ಲ್ಯಾಬ್ ತಂತ್ರಗಳು, ಬಯೋಸ್ಟಾಟಿಸ್ಟಿಕ್ಸ್. ನಾಲ್ಕನೇ ವರ್ಷ: ಪ್ರಾಜೆಕ್ಟ್ ವರ್ಕ್ ಮತ್ತು ಇಂಟರ್ನ್‌ಶಿಪ್. ಉದ್ಯೋಗದ ಪಾತ್ರಗಳು: ಬಯೋಟೆಕ್ನಾಲಜಿಸ್ಟ್ ಸಂಶೋಧನಾ ವಿಜ್ಞಾನಿ (Research Scientist) ಪ್ರೊಸೆಸ್ ಎಂಜಿನಿಯರ್ ಗುಣಮಟ್ಟ ನಿಯಂತ್ರಣ ಅಧಿಕಾರಿ (Quality Control Officer).

## ಬಾಗಲಕೋಟೆ ಉಪಚುನಾವಣೆ :ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಪರ ಬಸನಗೌಡ ಬಾದರ್ಲಿ ಮನೆ ಮನೆಗೆ ಮತಯಾಚನೆ

ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಹಿನ್ನೆಲೆಯಲ್ಲಿ ರಾಜಕೀಯ ಚಟುವಟಿಕೆಗಳು ದಿನದಿಂದ ದಿನಕ್ಕೆ ಚುರುಕುಗೊಂಡಿದ್ದು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ್ ಮೇಟಿ ಅವರ ಪರವಾಗಿ ಇಂದು ಬೆಳಿಗ್ಗೆ ನಗರದಲ್ಲಿ ಮನೆ ಮನೆಗೆ ಭೇಟಿ ನೀಡಿ ಮತಯಾಚನೆ ನಡೆಸಲಾಯಿತು.**

ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ನಗರದ ಪ್ರಮುಖ ಬಡಾವಣೆಗಳು ಮತ್ತು ವಾರ್ಡ್‌ಗಳಲ್ಲಿ ಸಂಚರಿಸಿ ಮತದಾರರನ್ನು ಭೇಟಿ ಮಾಡಿದರು. ಮನೆಮನೆಗೆ ತೆರಳಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಅಭಿವೃದ್ಧಿಗೆ ಬೆಂಬಲ ನೀಡುವಂತೆ ಮನವಿ ಮಾಡಿದರು.



ಈ ವೇಳೆ ಮಾತನಾಡಿದ ಬಸನಗೌಡ ಬಾದರ್ಲಿ ಅವರು, ಬಾಗಲಕೋಟೆ ಕ್ಷೇತ್ರದ ಸಮಗ್ರ ಅಭಿವೃದ್ಧಿ, ಮೂಲಭೂತ ಸೌಕರ್ಯಗಳ ವೃದ್ಧಿ ಹಾಗೂ ಜನಪರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದು ಹೇಳಿದರು.

ಉಮೇಶ್ ಮೇಟಿ ಅವರು ಜನಸೇವೆಗೆ ಬದ್ಧರಾಗಿರುವ ನಾಯಕರು ಆಗಿದ್ದು, ಕ್ಷೇತ್ರದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಅಭಿಪ್ರಾಯಪಟ್ಟರು. ಪ್ರಚಾರದ ವೇಳೆ ಸ್ಥಳೀಯ ಕಾಂಗ್ರೆಸ್ ನಾಯಕರು,



ಮಹಿಳಾ ಘಟಕದ ಸದಸ್ಯರು, ಯುವ ಕಾರ್ಯಕರ್ತರು ಹಾಗೂ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮತದಾರರೊಂದಿಗೆ ಸಂವಾದ ನಡೆಸಿದರು. ಮನೆ ಮನೆಗೆ ತೆರಳಿ ಮತದಾರರ ಸಮಸ್ಯೆಗಳನ್ನು ಆಲಿಸಿ ವಿಶ್ವಾಸ ಗಳಿಸುವ ಪ್ರಯತ್ನವೂ ನಡೆಯಿತು. ಉಪಚುನಾವಣೆ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ವಿವಿಧ ಪ್ರಚಾರ ಕಾರ್ಯಕ್ರಮಗಳು, ಸಭೆಗಳು ಮತ್ತು ಜನಸಂಪರ್ಕ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

## ಸಿಂಧನೂರಿನಲ್ಲಿ ನಕಲಿ ವೈದ್ಯರ ವಿರುದ್ಧ ಸಮರ: 16 ಕ್ಲಿನಿಕ್‌ಗಳ ಪರಿಶೀಲನೆ, ಕ್ರಮ ಕೈಗೊಂಡ ಅಧಿಕಾರಿಗಳ ತಂಡ




ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನಾದ್ಯಂತ ಸಾರ್ವಜನಿಕರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದ ನಕಲಿ ವೈದ್ಯರ ವಿರುದ್ಧ ಆರೋಗ್ಯ ಇಲಾಖೆ ಕಠಿಣ ಕ್ರಮ ಕೈಗೊಂಡಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಮಾರ್ಗದರ್ಶನದಲ್ಲಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳಾದ ಡಾ.ಶಾಕೀರ ಸರ್ ತಾಲೂಕು ನೋಡಲ್ ಅಧಿಕಾರಿಗಳಾಗಿದ್ದು ಮಾನ್ಯರ ನೇತೃತ್ವದಲ್ಲಿ ಅಧಿಕಾರಿಗಳ ತಂಡವು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿದೆ.**

ಈ ವಿಶೇಷ ಕಾರ್ಯಾಚರಣೆಯಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ. ಅಯ್ಯನಗೌಡ, ತಾಲೂಕು ಆಯುಷ್ ಅಧಿಕಾರಿ ಡಾ. ಅಹಮದ್ ಶರೀಫ್, ಗ್ರಾಮೀಣ ಪೊಲೀಸ್ ಠಾಣೆ ಮತ್ತು ಬಳಗಾನೂರು ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಇತರೆ ಸಂಬಂಧಪಟ್ಟ ಇಲಾಖಾ ಸಿಬ್ಬಂದಿ ಸಕ್ರಿಯವಾಗಿ ಭಾಗವಹಿಸಿದ್ದರು. ಕಾರ್ಯಾಚರಣೆಯ ವೇಳೆ ಬೆಳಗುರ್ಕಿಯಲ್ಲಿ 01, ಅಲಬನೂರಿನಲ್ಲಿ 03 ಸೇರಿದಂತೆ ಒಟ್ಟು 16 ಕ್ಲಿನಿಕ್‌ಗಳನ್ನು ಅಧಿಕಾರಿಗಳ ತಂಡವು ಪರಿಶೀಲನೆ ನಡೆಸಿತು. ಈ ವೇಳೆ ಆಯಾ ಕ್ಲಿನಿಕ್‌ಗಳಲ್ಲಿನ ವೈದ್ಯರು ಹೊಂದಿರುವ ಎಂಬಿಬಿಎಸ್, ಬಿಎಎಂಎಸ್, ಬಿಎಚ್‌ಎಂಎಸ್ ಹಾಗೂ ಯುನಾನಿ ಪದವಿ ಪ್ರಮಾಣಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು.

ಈ ಪೈಕಿ ನಿಯಮಬಾಹಿರವಾಗಿ ಕಾರ್ಯನಿರ್ವಹಿಸುತ್ತಿದ್ದ ಕ್ಲಿನಿಕ್‌ಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗವುದು ಎಂದರು. ಒಟ್ಟು 02 ಕ್ಲಿನಿಕ್‌ಗಳನ್ನು ತಕ್ಷಣವೇ ಸೀಜ್ ಮಾಡಲಾಗಿದ್ದು, 05 ಕ್ಲಿನಿಕ್‌ಗಳ ಕೆ ಪಿ ಎಂಇ ಕಾಯ್ದೆ ಉಲ್ಲಂಘನೆ ಮೇಲ್ನೋಟಕ್ಕೆ ಕಂಡುಬಂದಿದ್ದು ಪರಿಶೀಲನಾ ಹಂತದಲ್ಲಿದೆ ಎಂದರು ಉಳಿದ 09 ಕ್ಲಿನಿಕ್‌ಗಳ ಮಾಲೀಕರಿಗೆ ಸೂಕ್ತ ನೋಟಿಸ್ ಜಾರಿ ಮಾಡಲಾಗಿದೆ. ಕಾರ್ಯಾಚರಣೆಯು ಜವಳಗೇರಾದಲ್ಲಿ 5, ಆರ್–ಎಚ್ ಕ್ಯಾಂಪ್–2 ರಲ್ಲಿ 02, ಮರ ಕ್ಯಾಂಪ್‌ನಲ್ಲಿ 02, ಮಾಡಸಿರ್ವಾರದಲ್ಲಿ 01 ಸೇರಿದಂತೆ ವಿವಿಧ ಭಾಗಗಳಲ್ಲಿ ಜಂಟಿಯಾಗಿ ನಡೆದಿದೆ.

ಅಧಿಕೃತ ವೈದ್ಯಕೀಯ ಪದವಿ ಪಡೆಯದೆ ಸಾರ್ವಜನಿಕರಿಗೆ ಚಿಕಿತ್ಸೆ ನೀಡುವವರ ವಿರುದ್ಧ ಇನ್ನು ಮುಂದೆಯೂ ಜಿಲ್ಲೆಯಾದ್ಯಂತ ಇದೇ ರೀತಿಯ ಕಠಿಣ ಕ್ರಮಗಳು ಮುಂದುವರಿಯಲಿವೆ ಎಂದು ಅಧಿಕಾರಿಗಳ ತಂಡವು ಎಚ್ಚರಿಸಿದೆ. ಸಾರ್ವಜನಿಕರು ಅನಧಿಕೃತ ವೈದ್ಯರ ಕ್ಲಿನಿಕ್‌ಗಳಿಗೆ ಭೇಟಿನೀಡಿ ಚಿಕಿತ್ಸೆ ಪಡೆಯಲು ಮುಂದಾಗಬಾರದು ಕೇವಲ ಸರ್ಕಾರಿ ಅಥವಾ ಮಾನ್ಯತೆ ಪಡೆದ ನೋಂದಾಯಿತ ವೈದ್ಯರಿಂದ ಮಾತ್ರ ಚಿಕಿತ್ಸೆ ಪಡೆಯುವಂತೆ ಆರೋಗ್ಯ ಇಲಾಖೆ ಮನವಿ ಮಾಡಿದೆ. ಈ ಸಂದರ್ಭದಲ್ಲಿ ಡಾ.ಸೈ.ಶಾಕೀರ ಸಿಂಧನೂರ ತಾಲೂಕಿನ ನೋಡಲ್ ಅಧಿಕಾರಿ ಹಾಗೂ ಜಿಲ್ಲಾ.ಕ್ಷಯರೋಗ ನಿಯಂತ್ರಣಾಧಿಕಾರಿಗಳು ರಾಯಚೂರ,ಡಾ.ಅಯ್ಯನಗೌಡ ತಾಲೂಕಾರೋಗ್ಯಾಧಿಕಾರಿಗಳು ಸಿಂಧನೂರ,ಡಾ. ಮಣಿಶಂಕರ ನಮ್ಮ ಕ್ಲಿನಿಕ್ ವೈದ್ಯಾಧಿಕಾರಿಗಳು ಎಂ.ಬಿ.ಕಾಲೋನಿ,ಡಾ.ಅಮ್ಜದ್ ಪಾಷಾ ಆಯುಶ್ ವೈದ್ಯಾಧಿಕಾರಿಗಳು ಸಿಂಧನೂರು, ಗ್ರೂಪ್–ಡಿ ನೌಕರ ರಮೇಶ ಹಾಜರಿದ್ದರು.

## ಅಂಗನವಾಡಿ ಕೇಂದ್ರಕ್ಕೆ ಗ್ರಂಥಾಲಯ ಸ್ಥಳಾಂತರ, ದಲಿತ ವಿದ್ಯಾರ್ಥಿ ಪರಿಷತ್ ಸಂಘಟನೆಗೆ ಯಶಸ್ಸು: ಬಂಡೆಗುರು ಕರೇಗುಡ್ಡ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ನಕ್ಕುಂದಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಕರೆಗುಡ್ಡ ಗ್ರಾಮದಲ್ಲಿ ಹಳೆಯ ಅಂಗನವಾಡಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗ್ರಂಥಾಲಯವು ಮೂಲಭೂತ ಸೌಲಭ್ಯಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿರಲಿಲ್ಲ ಎಂದು ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಅಧ್ಯಕ್ಷರಾದ ಬಂಡೆಗುರು ಕರೇಗುಡ್ಡ ತಿಳಿಸಿದ್ದಾರೆ.**



ಈ ಕುರಿತು ದಲಿತ ವಿದ್ಯಾರ್ಥಿ ಪರಿಷತ್ ಸಂಘಟನೆ ವತಿಯಿಂದ ಹಲವಾರು ಬಾರಿ ತಾಲೂಕ್ ಪಂಚಾಯತ್ ಕಾರ್ಯಾಲಯ ಮಾನ್ವಿಯ ಅಧಿಕಾರಿಯಾದ ಖಾಲೀದ್ ಅಹ್ಮದ್ ಅವರಿಗೆ ಮನವಿ ಪತ್ರಗಳನ್ನು ಸಲ್ಲಿಸಿ, ನಕ್ಕುಂದಿ ಗ್ರಾಮ ಪಂಚಾಯತಿಯಲ್ಲಿ ಹೋರಾಟ ನಡೆಸಲಾಗಿತ್ತು. ಅದರ ಫಲವಾಗಿ ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯ ಒದಗಿಸಲು ಕರೆಗುಡ್ಡ ಗ್ರಾಮದ ಸರ್ಕಾರಿ ಶಾಲೆಗೆ ಗ್ರಂಥಾಲಯವನ್ನು ಸ್ಥಳಾಂತರ ಮಾಡಲಾಗಿದೆ ಎಂದು ಹೇಳಿದರು. ಈ ಕ್ರಮಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಆಡಳಿತಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ದಲಿತ ವಿದ್ಯಾರ್ಥಿ ಪರಿಷತ್ ಸಂಘಟನೆ ವತಿಯಿಂದ ಅಭಿನಂದನೆಗಳನ್ನು ತಿಳಿಸಲಾಯಿತು.

## ವಿದ್ಯಾರ್ಥಿ ಒಕ್ಕೂಟ ಉದ್ಘಾಟನಾ ಸಮಾರಂಭ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಹಾಗೂ 2025–26 ನೇ ಸಾಲಿನ ವಿದ್ಯಾರ್ಥಿ ಒಕ್ಕೂಟ ಉದ್ಘಾಟನಾ ಸಮಾರಂಭವು ಗುರುವಾರ ಸ್ಥಳೀಯ ಶ್ರೀ ಎಸ್.ಕೆ.ಶಿಕ್ಷಣ ಮಹಾವಿದ್ಯಾಲಯದಲ್ಲಿ ಜರುಗಿತು. ವಿದ್ಯಾರ್ಥಿ ಒಕ್ಕೂಟವನ್ನು ವ್ಹಿ.ಸಿ.ಹಿರೇಮಠ ಚೇರಮನ್ನರು ವೀ.ವಿ.ಸಂಘ, ಹಾಗೂ ಚೇರಮನ್ನರು, ಎಸ್.ಕೆ.ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ತಾಳಿಕೋಟಿ ಇವರು ದೀಪ ಪ್ರಜ್ವಲಿಸುವುದರ ಮುಖಾಂತರ ಉದ್ಘಾಟಿಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಅವರು ಅವಕಾಶಗಳನ್ನು ಬಳಸಿಕೊಂಡು ಸಮಾಜದಲ್ಲಿ ಉತ್ತಮವಾಗಿ ಗುರುತಿಸಿಕೊಂಡು ಬೆಳೆಯಬೇಕು ಪ್ರಶಿಕ್ಷಣಾರ್ಥಿಗಳು ಉತ್ತಮ ಮೌಲ್ಯಗಳನ್ನು ರೂಢಿಸಿಕೊಂಡು ಬೆಳೆದು ನಿಲ್ಲಿ ಎಂದು ತಿಳಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಅಭಿವೃದ್ಧಿಗೆ ಹಾಗೂ ಮಹಾವಿದ್ಯಾಲಯದ ಅಭಿವೃದ್ಧಿಗೆ ಪೂರಕವಾದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು, ಗುಂಪಿನ ಮಹತ್ವವನ್ನು ತಿಳಿಯಪಡಿಸುವಲ್ಲಿ ವಿದ್ಯಾರ್ಥಿ ಒಕ್ಕೂಟವು ಪ್ರಮುಖ ಪಾತ್ರ



ವಹಿಸುತ್ತದೆ ಎಂಬುದನ್ನು ತಿಳಿಯಪಡಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿರುವ ಶಿಕ್ಷಕರು ಹಾಗೂ ರಾಷ್ಟ್ರೀಯ ಬಸವ ಭೂಷಣ ಪುರಸ್ಕೃತರಾದ ಎಂ.ಇ.ಕಾಗವಾಡ ಅವರು ವಿದ್ಯಾರ್ಥಿಗಳು ಸಂಶೋಧನಾ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಜೊತೆಗೆ ಸತ್ಯಯುತವಾದದ್ದನ್ನು, ಸತ್ಯ ಸಂಗತಿಗಳನ್ನು ತಿಳಿಹೇಳುವುದರ ಜೊತೆಗೆ ಶಿಕ್ಷಕ ವೃತ್ತಿಯ ಪಾವಿತ್ರತೆಯನ್ನು ಕಾಪಾಡಿಕೊಳ್ಳಬೇಕು ಶಿಕ್ಷಕರಾದ ನಾವುಗಳು ಕಷ್ಟಪಟ್ಟು ಅಧ್ಯಯನ ಶೀಲರಾಗುವುದರ ಜೊತೆಗೆ ಇಷ್ಟ ಪಟ್ಟು ಕಲಿಕಾ ಕಾರ್ಯದಲ್ಲಿ ಭಾಗಿದಾರರಾಗಬೇಕು ಎಂದರು. ಪ್ರಶಿಕ್ಷಣಾರ್ಥಿಗಳಿಗೆ ಹಲವಾರು ದೃಷ್ಟಾಂತಗಳೊಂದಿಗೆ ಹಲವಾರು ವಿಚಾರಗಳನ್ನು ತಿಳಿಯಪಡಿಸಿದರು.

ವೀ.ವಿ.ಸಂಘ ವೈಸ್ ಚೇರಮನ್ನರು ಹಾಗೂ ಎಸ್.ಕೆ.ಶಿಕ್ಷಣ ಮಹಾವಿದ್ಯಾಲಯದ ಚೇರಮನ್ನರಾದ ಕೆ.ಎಸ್.ಮುರಾಳ ಅವರು ಪ್ರಶಿಕ್ಷಣಾರ್ಥಿಗಳು ಭವ್ಯಭಾರತದ ಶಿಲ್ಪಿಯಾಗಬೇಕು ಸಮಾಜ ಸುಧಾರಣೆಯಲ್ಲಿ ಪ್ರಶಿಕ್ಷಣಾರ್ಥಿಗಳ ಪಾತ್ರ ಬಹುಮುಖ್ಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ ಪ್ರಾಚಾರ್ಯರಾದ ಡಾ.ಆರ್.ಎಂ. ಬಂಟನೂರ ಅವರು ಪ್ರಶಿಕ್ಷಣಾರ್ಥಿಗಳು ಸಂಘದ ಕಾರ್ಯಚಟುವಟಿಕೆಯಲ್ಲಿ ಭಾಗಿದಾರರಾಗುವ ಮುಖಾಂತರ ಮಹಾವಿದ್ಯಾಲಯದ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ತಿಳಿಸಿ ಪ್ರಶಿಕ್ಷಣಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದರು ಜೊತೆಗೆ ವಿದ್ಯಾರ್ಥಿ ಒಕ್ಕೂಟದ ಮಹತ್ವವನ್ನು ತಿಳಿಯಪಡಿಸಿದರು. ಕಾರ್ಯಕ್ರಮದಲ್ಲಿ ವಿವಿ ಸಂಘದ ಕಾರ್ಯದರ್ಶಿ ಎಮ್.ಎಸ್.ಸರಶೆಟ್ಟಿ, ಸಹ ಕಾರ್ಯದರ್ಶಿ ಆರ್.ಸಿ.ಪಾಟೀಲ, ವಿ.ವಿ.ಸಂಘದ ನಿರ್ದೇಶಕರು, ಸದಸ್ಯರು, ಅಂಗ ಸಂಸ್ಥೆಗಳ ಚೇರಮನ್ನರು, ಎಸ್.ಕೆ.ಶಿಕ್ಷಣ ಮಹಾವಿದ್ಯಾಲಯದ ಸದಸ್ಯರು, ಮಹಾವಿದ್ಯಾಲಯದ ಸರ್ವ ಸಿಬ್ಬಂದಿವರ್ಗ, ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಪ್ರೊ.ವಾಯ್.ಎಚ್. ಅಂಗಡಗೇರಿರವರು ಸ್ವಾಗತಿಸಿದರು. ಪ್ರೋ.ಯು.ಎಸ್. ಮಂಗೊಂಡರವರು ಪುಷ್ಪಾರ್ಪಣೆ ನೇರವೇರಿಸಿದರು. ನವೀನ ವಂದಿಸಿದರು. ಪ್ರೊ.ಎ.ಎ.ಗಂಗನಗೌಡರ ಮಹಾವಿದ್ಯಾಲಯ 25ಕ್ಕೂ ಹೆಚ್ಚು ಟಿ.ಇ.ಟಿ ಉತ್ತೀರ್ಣರಾದವರಿಗೆ ಸನ್ಮಾನ ನೇರವೇರಿಸಿದರು. ಪ್ರೊ.ಸುರೇಶ ಬಡಿಗೇರ ಪಧಾದಿಕಾರಿಗಳಿಗೆ ಪುಸ್ಪಾರ್ಪಣೆ ನೇರವೆರಿಸಿದರು ಪ್ರೊ. ಎಮ್.ಎ.ಪೋತದಾರ ಕಾರ್ಯಕ್ರಮ ನಿರೂಪಿದರು.

### ಮಸ್ಕಿ ತಾಲೂಕಿನಲ್ಲಿ 21 ಗ್ರಾಪಂ, ಕಳೆದ ಆರ್ಥಿಕ ವರ್ಷಕ್ಕೆ 4.49 ಕೋಟಿ ರೂ. ಕರ ವಸೂಲಾತಿ ಗುರಿ, 2.53 ಕೋಟಿ ರೂ. ತೆರಿಗೆ ಸಂಗ್ರಹ, ಶೇ. 56.43 ಪ್ರಗತಿ

## ಕರ ವಸೂಲಾತಿಯಲ್ಲಿ ಮಸ್ಕಿ ಪ್ರಥಮ ದಾಖಲೆ ಪ್ರಮಾಣದಲ್ಲಿ ಟ್ಯಾಕ್ಸ್ ಸಂಗ್ರಹ.

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಸ್ಥಳೀಯ ಮಟ್ಟದಿಂದ ತೆರಿಗೆ ವಸೂಲಾತಿಯಿಂದ ಗ್ರಾಮ ಪಂಚಾಯತಿಗಳ ಸ್ವಂತ ಸಂಪನ್ಮೂಲ ವೃದ್ಧಿಯಾಗಲಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅನುಕೂಲವಾಗುತ್ತದೆ ಹಾಗೂ ಗ್ರಾಮ ಪಂಚಾಯತಿಗಳ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿದೆ 2024–25ನೇ ಸಾಲಿನಲ್ಲಿ 2.53 ಕೋಟಿ ಸಂಗ್ರಹಣೆ ಮಾಡುವ ಮೂಲಕ ಜಿಲ್ಲೆಯಲ್ಲಿ ಅತಿ ಹೆಚ್ಚು ತೆರಿಗೆ ವಸೂಲಾತಿ ಮಾಡಿದ ರಾಯಚೂರು ಜಿಲ್ಲೆ ಪ್ರಥಮ ಸ್ಥಾನ ಪಡೆದಿದೆ. ಅದರಲ್ಲೂ ಮಸ್ಕಿ ತಾಲೂಕು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಹೆಗ್ಗಳಿಕೆಗೆ ಪಾತ್ರವಾಗಿದೆ.**

ಮಸ್ಕಿ ತಾಲೂಕು ಕೇಂದ್ರವು ಮೂರು ತಾಲೂಕಿನ ಗ್ರಾಮ ಪಂಚಾಯತಗಳ ವ್ಯಾಪ್ತಿಯಲ್ಲಿನ ಸುಮಾರು 161 ನೀರಾವರಿ ಮತ್ತು ಒಣ ಬೇಸಾಯ ಆಶ್ರಿತ ಗ್ರಾಮಗಳನ್ನು ಸೇರಿಸಿ 21 ಗ್ರಾಪಂಗಳನ್ನುಒಳಗೊಂಡಿದೆ. ತಾಲೂಕಿನಲ್ಲಿ ಇವರೆಗೂ ಪೂರ್ಣ ಪ್ರಮಾಣದಲ್ಲಿ ತಾಲೂಕು ಕಚೇರಿಗಳಿಲ್ಲದೆ ಜನರು ಹಾಗೂ ಅಧಿಕಾರಿಗಳು ತೊಂದರೆ ಅನುಭವಿಸುತ್ತಿದ್ದಾರೆ ಆದರೂ ಸಹ ಗ್ರಾಮ ಮಟ್ಟದಲ್ಲಿ ಅತಿ ಹೆಚ್ಚು ತೆರಿಗೆ ವಸೂಲಿ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ಶೇ.100%ರಷ್ಟು ತೆರಿಗೆ ಸಂಗ್ರಹ: ಮಸ್ಕಿ ತಾಲೂಕಿನ 21 ಗ್ರಾಮ ಪಂಚಾಯತಗಳಿಗೆ ಕಳೆದ ಆರ್ಥಿಕ ವರ್ಷಕ್ಕೆ 4.49 ಕೋಟಿ ರೂ. ಕರ ವಸೂಲಾತಿ ಗುರಿ ನಿಗದಿಪಡಿಸಲಾಗಿತ್ತು.

ಇದರಲ್ಲಿ 2.53 ಕೋಟಿ ರೂ. ತೆರಿಗೆ ಸಂಗ್ರಹಿಸಿ ಶೇ. 56.43 ಪ್ರಗತಿ ಸಾಧಿಸಲಾಗಿದೆ 21 ಗ್ರಾಪಂಗಳಲ್ಲಿ ಹಿರೇದಿನ್ನಿ, ತೋರಣದಿನ್ನಿ, ವಟಗಲ ಗ್ರಾಮ ಪಂಚಾಯತಗಳ ಲ್ಲಿ ಶೇ. 100 ತೆರಿಗೆ ವಸೂಲಿ ಮಾಡುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮೂಲ ಸೌಲಭ್ಯಒದಗಿಸಲು ಅನುಕೂಲ: ಗ್ರಾಮೀಣಾಭಿವೃದ್ಧಿಯ ವಿಕೇಂದ್ರಿಕರಣದಲ್ಲಿ ಗ್ರಾಮ ಪಂಚಾಯತಿಗಳು ನಿರ್ಣಾಯಕ ಪಾತ್ರ ನಿರ್ವಹಿಸುತ್ತಿವೆ. ಸ್ಥಳೀಯರಿಗೆ ಕುಡಿಯುವ ನೀರು, ಬೀದಿ ದೀಪಗಳ ನಿರ್ವಹಣೆ, ಶೌಚಾಲಯ ನಿರ್ಮಾಣ, ಆಸ್ತಿಗಳಿಗೆ ಸಂಬಂಧಿಸಿದ ದಾಖಲೆ ಪತ್ರ ವಿತರಣೆ, ಉದ್ಯೋಗ ಖಾತ್ರಿ, ಜನನ ಮತ್ತು ಮರಣ ಪ್ರಮಾಣ ಪತ್ರ ವಿತರಣೆ ಸೇರಿ ಪ್ರತಿಯೊಂದು ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸುವ ಗ್ರಾಪಂಗಳು ಸ್ಥಳೀಯರಿಗೆ ಬಹಳಷ್ಟು ಅನುಕೂಲ ಕಲ್ಪಿಸಿವೆ.

ಕರ ವಸೂಲಿಗಾರರು, ನೀರು ಗಂಟಿ, ಗ್ರಂಥ ಪಾಲಕರು ಸೇರಿ ವಿವಿಧ ಸಿಬ್ಬಂದಿ ವೇತನ, ಇನ್ನಿತರ ಕಚೇರಿ ಖರ್ಚಿಗಾಗಿ ಗ್ರಾಮ ಪಂಚಾಯತಿಗಳು ತೆರಿಗೆ ವಸೂಲಾತಿಯಿಂದ ಸಂಗ್ರಹವಾಗುವ ಹಣವನ್ನು ಆಶ್ರಯಿಸಿವೆ.



**ಜಿಪಂನ ಮೇಲಧಿಕಾರಿಗಳ ನಿರ್ದೇಶನದಂತೆ ತೆರಿಗೆ ವಸೂಲಾತಿಯಲ್ಲಿ ನಿಗಾ ವಹಿಸಿ ದಾಖಲೆ ಪ್ರಮಾಣದಲ್ಲಿ ತೆರಿಗೆ ಸಂಗ್ರಹಿಸಲಾಗಿದೆ. ಇದರಿಂದ ಗ್ರಾಪಂ ಸಿಬ್ಬಂದಿ ವೇತನ, ಇನ್ನಿತರ ಖರ್ಚು ವೆಚ್ಚಗಳಿಗೆ ಹಣ ಖರ್ಚಾಗಲಿದೆ. ಪ್ರಥಮ ಸ್ಥಾನ ಪಡೆಯಲು ಶ್ರಮಿಸಿದ ಎಲ್ಲಾ ಸಿಬ್ಬಂದಿಗಳಿಗೆ ಹಾಗೂ ನಿಗದಿತ ಸಮಯದಲ್ಲಿ?ಕರ ಪಾವತಿ ಮಾಡಿದ ಎಲ್ಲರಿಗೂ ಧನ್ಯವಾದಗಳು ಸಲ್ಲಿಸುವುದಾಗಿ ತಿಳಿಸಿದರು.**

**–ಅಮರೇಶ ಯಾದವ. ಕಾರ್ಯನಿರ್ವಾಹಕ ಅಧಿಕಾರಿಗಳು ತಾಪಂ ಮಸ್ಕಿ**

ಹೀಗಾಗಿ ಗ್ರಾಪಂಗಳ ಸುಗಮ ಆಡಳಿತಕ್ಕಾಗಿ ತೆರಿಗೆ ವಸೂಲಾತಿ ನಿರ್ಣಾಯಕವಾಗಲಿದೆ. ಹೀಗಾಗಿ ಮಸ್ಕಿ ತಾಲೂಕಿನ 21 ಗ್ರಾಮ ಪಂಚಾಯತಿಗಳಲ್ಲಿ ಕೈಗೊಂಡ ನಿರಂತರ ಅಭಿಯಾನದ ಪರಿಣಾಮವಾಗಿ ತೆರಿಗೆ ವಸೂಲಾತಿಯಲ್ಲಿ ಮೇಲುಗೈ ಸಾಧಿಸಿದೆ.

ಗ್ರಾಮನಿಂದ ತೆರಿಗೆ ವಸೂಲಾತಿ ಅಭಿಯಾನ: ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹಣೆ ಮಾಡಲು ಜಿಪಂಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರ ನಿರ್ದೇಶನದಂತೆ ಪ್ರತಿ ಗುರುವಾರ ತೆರಿಗೆ ವಸೂಲಾತಿ ಅಭಿಯಾನ ಕೈಗೊಳ್ಳಲಾಗಿತ್ತು.

ಅದರಂತೆ ಇಲ್ಲಿನ ತಾಲೂಕು ಪಂಚಾಯತ್ ಅಧಿಕಾರಿ ಗಳು ಕಾಳಜಿ ವಹಿಸಿ ನಿರಂತರವಾಗಿ ಪ್ರತಿ ನಿತ್ಯ ವಿಸಿ ಮೂಲಕ ಸಭೆ ಕರೆದು, ವಿಚಾರಿಸಿದ ಪರಿಣಾಮವಾಗಿ ತೆರಿಗೆ ವಸೂಲಾತಿಯಲ್ಲಿ ಮಸ್ಕಿ ತಾಪಂ ಮೇಲುಗೈ ಸಾಧಿಸಿದೆ. ಅದರಲ್ಲೂ ಮಾರ್ಚ್ ತಿಂಗಳು ಸಂಪೂರ್ಣ ತೆರಿಗೆ ವಸೂಲಾತಿಗೆ ಆದ್ಯತೆ ನೀಡಿದ ಪರಿಣಾಮ ತೃಪ್ತಿಕರ ಫಲಿತಾಂಶ ದೊರೆತಿದೆ. ತೆರಿಗೆ ಪಾವತಿಸುವಂತೆ ಸ್ಥಳೀಯರ ಮನವೊಲಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಮುಂಭಾಗ, ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್ ಅಳವಡಿಸಿ, ಕಸ ವಿಲೇವಾರಿ ವಾಹನ, ದೇವಸ್ಥಾನದ ಮೈಕ್ ಗಳಲ್ಲಿ ವ್ಯಾಪಕ ಪ್ರಚಾರ ಕೈಗೊಂಡಿದ್ದರಿಂದ ಗಮನಾರ್ವಾಗಿ ತೆರಿಗೆ ವಸೂಲಾತಿಯಾಗಿದೆ. ಆಯಾ ಗ್ರಾಪಂ ಪಿಡಿಒಗಳ ನೇತೃತ್ವದಲ್ಲಿ ಗ್ರಾಪಂ ಕಾರ್ಯದರ್ಶಿಗಳು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಕರ ವಸೂಲಿಗಾರರು, ಕಂಪ್ಯೂಟರ್ ನಿರ್ವಾಹಕರು, ನೀರು ಗಂಟಿಗಳು, ಬಿಎಫ್ಟಿ, ಜಿಕೆಎಂ ಸೇರಿ ಎಲ್ಲಾ ಗ್ರಾಪಂ ಸಿಬ್ಬಂದಿ ಮನೆ ಮನೆಗೆ ತೆರಳಿ ಕರ ವಸೂಲಿಗೆ ಕೈಜೋಡಿಸುವ ಮೂಲಕ ತೆರಿಗೆ ಸಂಗ್ರಹಣೆಯಲ್ಲಿ ಮುಂಚೂಣಿಯಲ್ಲಿ ಇದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.